ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಆಗಸ್ಟ್ 2023 ಮಾಸ ಪತ್ರಿಕೆ

ಸಂಪುಟ/Volume : 45
ಸಂಚಿಕೆ/Issue : 11
ಪುಟ/Pages : 12
ಬೆಲೆ/Price : ₹ 15/–

**Akhila Karnataka Shikshaka Samachar | August 2023 | Monthly**




**A Journal of Karnataka Rajya Madhyamika Shikshaka Sangha (R.)**

# ಸಂಪಾದಕೀಯ

ಆಗಸ್ಟ್ 15 ಭಾರತೀಯರ ಪಾಲಿಗೆ ಶೌರ್ಯ ಪರಾಕ್ರಮವು ಫಲಪ್ರದವಾದ ದಿನ. ೩೦೦ ವರ್ಷಗಳಿಂದ ಯುರೋಪಿಯನ್ನರ ಗುಲಾಮಗಿರಿಯಿಂದ ಭಾರತಾಂಬೆ ಮುಕ್ತಿ ಹೊಂದಿದ ದಿನ. ಈ ದಿನಕ್ಕಾಗಿ ಅದೆಷ್ಟೋ ಭಾರತಾಂಬೆಯ ವೀರ ಮಕ್ಕಳು ಸರ್ವಸ್ವವನ್ನು ತ್ಯಾಗ ಮಾಡಿ ದೇಶಕ್ಕಾಗಿ ದುಡಿದ ಪ್ರತಿಫಲ, ಬ್ರಿಟಿಷರ ದಾಸ್ಯದ ಸಂಕೋಲೆಯಿಂದ ಬಿಡುಗಡೆ ಹೊಂದಿ, ಭಾರತಕ್ಕೆ ಸ್ವಾತಂತ್ರವನ್ನು ಗಳಿಸಿಕೊಟ್ಟ ದಿನ. ಆಗಸ್ಟ್-15 ನಮಗೆಲ್ಲ ಸಂಭ್ರಮದ ಹಬ್ಬದ ದಿನ. ಈ ದಿನ ಸ್ವಾತಂತ್ರ ಸಂಗ್ರಾಮದಲ್ಲಿದ್ದ ತ್ಯಾಗಿಗಳನ್ನು ನೆನಪಿಸಿಕೊಳ್ಳುವ ಮತ್ತು ಗಳಿಸಿರುವ ಸ್ವಾತಂತ್ರವನ್ನು ಉಳಿಸಿಕೊಂಡು ಹೋಗುವ ಕರ್ತವ್ಯದ ಜಾಗೃತಿಯ ದಿನವು ಹೌದು.

ಕಿತ್ತೂರುರಾಣಿ ಚೆನ್ನಮ್ಮ, ಸಂಗೊಳ್ಳಿ ರಾಯಣ್ಣ ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಮಂಗಲ ಪಾಂಡೆರಂತಹವರು ಬಿತ್ತಿದ ಬೀಜ. ಸ್ವಾತಂತ್ರ್ಯದ ಚಳುವಳಿಯ ಹರಿಕಾರರಾದ ಮಹಾತ್ಮ ಗಾಂಧೀಜಿ, ಸುಭಾಷ್ ಚಂದ್ರ ಬೋಸ್, ಡಾ. ಬಿ. ಆರ್. ಅಂಬೇಡ್ಕರ್, ಭಗತ್ ಸಿಂಗ್, ಚಂದ್ರಶೇಖರ ಆಜಾದ್, ಸುಖದೇವ್, ಖುಧಿರಾಮ ಬೋಸ್, ರಾಮ ಪ್ರಸಾದ ಬಿಸ್ಮಿಲ್ಲ, ವಿನಾಯಕ ದಾಮೋದರ ಸಾವರ್ಕರ್, ಅರುಣಾ ಆಸೀಫ್ ಅಲಿ, ಅಶ್ರಫಉಖಾನ್, ಸೂರ್ಯಸೇನ, ಬೆಳವಡಿ ಮಲ್ಲಮ್ಮ, ವೀರ ಪಾಂಡ್ಯ ಕಟ್ಟಬೊಮ್ಮನ್, ಬಿರ್ಸಾ ಮುಂಡಾ, ಕಮಲಾದೇವಿ ಚಟ್ಟೋಪಾಧ್ಯಾಯ, ಕೊರಗುಂದ ನಿಂಗಪ್ಪ, ಹಿರೇಕೊಂಬಿ ಗವಿಸಿದ್ಧ ಬೆಳವಡಿ, ರಾಮಪ್ಪ ಕಂಕಣವಾಡಿ, ಕೊಮರಂ ಭೀಮ, ತಿಗಳ ಮರಿಯಪ್ಪ ಹೀಗೆ ಅನೇಕರು ಸ್ವಾತಂತ್ರ್ಯದ ಚಳುವಳಿಯಲ್ಲಿ ತೊಡಗಿ ಬ್ರಿಟಿಷರು ದೇಶವನ್ನು ಬಿಟ್ಟು ಹೋಗುವಂತೆ ಮಾಡಿದರು. 77ನೇ ಸ್ವಾತಂತ್ರದ ದಿನವನ್ನು ಆಚರಿಸುತ್ತಿರುವ ನಾವುಗಳು ನಡೆದು ಬಂದ ದಾರಿಯ ಸಿಂಹಾವಲೋಕನ ಮತ್ತು ಮುಂದಿನ ದಾರಿಯ ಯೋಜನೆ ಮಾಡುವ ಅವಶ್ಯಕತೆ ಹಿಂದಿಗಿಂತಲು ಇಂದು ಹೆಚ್ಚಾಗಿದೆ. ಸ್ವಾತಂತ್ರದ ನಂತರ ಸಾಮಾಜಿಕ, ಧಾರ್ಮಿಕ, ಆರ್ಥಿಕ, ಶೈಕ್ಷಣಿಕ ಹಾಗೂ ಉಳಿದೆಲ್ಲ ಎದುರಿಸಿದ ಸವಾಲುಗಳು ನೂರಾರು. ಅದೆಲ್ಲವುಗಳನ್ನು ಎದುರಿಸಿ ಮುನ್ನುಗ್ಗುತ್ತಿರುವ ನಾವುಗಳು ದೇಶಕ್ಕೆ ಪೂರಕವಾದ 'ರಾಷ್ಟ್ರೀಯ ಶಿಕ್ಷಣ ನೀತಿ' ರೂಪುಗೊಂಡಿದ್ದು ರಾಷ್ಟ್ರದ ಏಕತೆ ಮತ್ತು ಅಖಂಡತೆಯನ್ನು ಹಾಗೂ ಸಂವಿಧಾನದ ಆಶೆಯವನ್ನು ಯಶಸ್ವಿಗೊಳಿಸಲು ಮೆಕಾಲೆ ಆಧಾರಿತ ಶಿಕ್ಷಣ ಪದ್ಧತಿಯಿಂದ ಹೊರ ಬಂದು ಭಾರತದ ರಾಷ್ಟ್ರೀಯ ಚಿಂತನೆಗಳ ನೆಲೆಗಟ್ಟಿನಲ್ಲಿ ಬಂದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಸೈದ್ಧಾಂತಿಕ ಭಿನ್ನತೆಗಳನ್ನು ಹೊರಗಿಟ್ಟು ದೇಶದಲ್ಲಿ ಜಾರಿ ಮಾಡುವ ಅವಶ್ಯವೆನಿಸುತ್ತದೆ. ದೇಶ ಮೊದಲು ಎನ್ನುವ ವೇದಘೋಷ ನಮ್ಮದಾಗಲಿ.

ಭಾರತೀಯರ ಅಂತಃಕರಣದಲ್ಲಿರುವ ಸಹೋದರತ್ವದ ಶಕ್ತಿ, ಪ್ರಪಂಚಕ್ಕೆ ವಿವೇಕಾನಂದರನ್ನು ಪರಿಚಯಿಸಿತು. ಸಹೋದರತ್ವ ಶಬ್ದದ ಅರ್ಥ ಭಾರತೀಯ ಸಂಸ್ಕೃತಿಯನ್ನು ಪ್ರಪಂಚಕ್ಕೆ ಅರ್ಥೈಸಿತು. ಶ್ರೀಮಂತ ಸಂಸ್ಕೃತಿಯ ನೆಲೆ ಬೀಡಾದ ಭಾರತ ವೈಜ್ಞಾನಿಕ ಸತ್ಯವನ್ನು ತನ್ನಲ್ಲಿ ಅಡಗಿಸಿಟ್ಟುಕೊಂಡ ಆಚರಣೆಯ ನೆಪದಲ್ಲಿ ಭಾರತೀಯರ ಮಧ್ಯದಲ್ಲಿ ಅನೇಕ ಹಬ್ಬಗಳನ್ನು ಆಚರಿಸುತ್ತದೆ. ಹಾಗೆ ಆಚರಿಸುವ ಹಬ್ಬಗಳಲ್ಲಿ ನೂಲ ಹುಣ್ಣಿಮೆ ದಿನದಂದು ಆಚರಿಸಲ್ಪಡುವ 'ರಕ್ಷಾಬಂಧನ'ವು ಒಂದು ಪೌರಾಣಿಕ ಹಿನ್ನಲೆಯಿಂದ, ರಕ್ಷಾಬಂಧನವು ಅಣ್ಣ, ತಂಗಿ, ಅಕ್ಕ ತಮ್ಮಂದಿರ ಮಧ್ಯದಲ್ಲಿರುವ ಸಹೋದರತ್ವದ ಸಂಬಂಧ ಗಟ್ಟಿ ಮಾಡುವುದಾಗಿದೆ. ಇಂದು ಸಮಾಜದಲ್ಲಿ ಸಮಾನತೆ, ಶಾಂತಿ ಸಹಬಾಳ್ವೆ ಅವಶ್ಯಕವಾಗಿದೆ.

ಹಿಂದೊಂದು ಕಾಲದಲ್ಲಿ ಹೆಣ್ಣು ಮಕ್ಕಳ ರಕ್ಷಣೆಯ ದ್ಯೋತಕವಾಗಿ ಬಂದಿರುವ ರಕ್ಷಾಬಂಧನ, ಇಂದು ಹೆಣ್ಣು ಮಕ್ಕಳು ಸರ್ವ ಕ್ಷೇತ್ರಗಳಲ್ಲಿಯೂ ಸಬಲರಾಗಿದ್ದಾರೆ. ಆದರೆ ಇಂದು ದೇಶದ ರಕ್ಷಣೆಗಾಗಿ ಸಮಾಜದ ಸಹಬಾಳ್ವೆಗಾಗಿ ನಾವೆಲ್ಲರು ಕಂಕಣಬದ್ಧರಾಗಿರೋಣ ಎನ್ನುವ ಕಾರಣಕ್ಕಾಗಿ ರಕ್ಷಾಬಂಧನ ಆಚರಣೆ ಅವಶ್ಯವಲ್ಲವೆ?

ಸಂಪಾದಕ


## ಸಂಪಾದಕ ಮಂಡಳಿ

ಗೌರವ ಸಂಪಾದಕರು
ಹೆಚ್. ನಾಗಭೂಷಣರಾವ್

ಪ್ರಧಾನ ಸಂಪಾದಕರು ಮತ್ತು ಪ್ರಕಾಶಕರು
ಜೆ. ಎಮ್. ಜೋಶಿ

ವ್ಯವಸ್ಥಾಪಕ ಸಂಪಾದಕರು
ಸಂದೀಪ ಬೂದಿಹಾಳ

ಗೌರವ ಸಲಹೆಗಾರರು
ಚಿದಾನಂದ ಆ. ಪಾಟೀಲ
ಮಮತಾ ಡಿ. ಕೆ.

ಸಂಪಾದಕ ಮಂಡಳಿ
ಎನ್. ನಾಗರಾಜ್
ನಂ. ನಾಗಲಕ್ಷ್ಮಿ
ಸೀತಾಲಕ್ಷ್ಮಿ ಆರ್.

ವಿನ್ಯಾಸಕಾರರು
ಪ್ರೇರಣಾ

ಕಛೇರಿ ವ್ಯವಸ್ಥಾಪಕರು
ವರಲಕ್ಷ್ಮಿ ಕೆ. ಎನ್.


## ಪರಿವಿಡಿ


- ಸ್ವಾತಂತ್ರ್ಯದ ಅಮೃತಕಾಲ– ಶಿಕ್ಷಕರ ಜವಾಬ್ದಾರಿ 3
- ರಕ್ಷಾಬಂಧನ 5
- 'ಗುರು' ಎಂದರೆ ಯಾರು? 6
- ಸುಂದರ ಮಣಿಪುರದಲ್ಲಿಯ ಅನಾಗರಿಕ ಬೆಂಕಿ, ಬೇಗ ಆರಲಿ 7
- ಗುರುವಂದನಾ ಕಾರ್ಯಕ್ರಮ– ಬೆಂಗಳೂರು ಉತ್ತರ ಜಿಲ್ಲೆ 8
- ಏಕಾತ್ಮತಾ ಸ್ತೋತ್ರ 10
- 36ನೇ ಪ್ರತಿಭಾ ಪುರಸ್ಕಾರ– ಬೆಂಗಳೂರು ಉತ್ತರ ಜಿಲ್ಲೆ 11
- ಚಿತ್ರ ಸುದ್ದಿ 12

# ಸ್ವಾತಂತ್ರ್ಯದ ಅಮೃತಕಾಲ– ಶಿಕ್ಷಕರ ಜವಾಬ್ದಾರಿ



**ಹೆಚ್. ನಾಗಭೂಷಣ್ ರಾವ್**
**ಪೋಷಕರು**
**ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ**

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂಭ್ರಮ ಮುಗಿಯಲು ಕೆಲವೇ ದಿನ ಉಳಿದಿದೆ. 76ನೇ ವರ್ಷ ತುಂಬಲಿದೆ. ಇನ್ನು 24 ವರ್ಷಗಳನ್ನಷ್ಟೇ ಸ್ವಾತಂತ್ರ್ಯದ ಅಮೃತ ಕಾಲವೆಂದೇ ಕರೆಯಬೇಕು. ಇಂದು ಸ್ವಾತಂತ್ರ್ಯ ಗಳಿಸಲು ಶ್ರಮಿಸಿದ ಪೀಳಿಗೆ ಉಳಿದೇ ಇಲ್ಲವೇನೋ! ಆದರೆ ಅವರ ನೆನಪುಗಳೂ ನಶಿಸಿ ಹೋಗುತ್ತಿರುವುದು ಈ ದೇಶದ ದುರಂತ " A Nation Which forgets it's past has no future" ಎಂಬ ಆಂಗ್ಲ ನುಡಿಯೊಂದಿದೆ. ಹಾಗಾಗಲು ಬಿಡದೆ ಅದರ ಹಿರಿಮೆ, ಗರಿಮೆ, ಸಾಧನೆಗಳನ್ನು ಅದಕ್ಕಾಗಿ ಶ್ರಮಿಸಿದ ಸಾಧಕರನ್ನೂ ಮುಂದಿನ ಪೀಳಿಗೆಗಳಿಗೆ ನೆನಪಿಸುವ, ಅವು ನಡೆದ ಮಾರ್ಗದಲ್ಲಿ ನಡೆಯಲು ಬೆಳಕು ತೋರಿಸುವ ಕೆಲಸ ನಮ್ಮ ಶಿಕ್ಷಕರದ್ದಾಗಬೇಕು. ಶಿಕ್ಷಣದ ತಿರುಳೇ ಭಾವೀ ಜನಾಂಗವು ತಮ್ಮ ಪೂರ್ವಜರ ಬಗ್ಗೆ ಹೆಮ್ಮೆ ಪಡುವಂತೆ ಮಾಡುವುದು. ಸ್ವಾಮಿ ವಿವೇಕಾನಂದರ ಪ್ರಕಾರ ಸ್ವತ್ವ, ಸ್ವಾಭಿಮಾನಭರಿತ, ಮೌಲ್ಯವಂತ ಮನುಷ್ಯರನ್ನು ನಿರ್ಮಾಣ ಮಾಡುವುದೇ ಶಿಕ್ಷಣ. ಇದನ್ನು ನಾವು ಶಿಕ್ಷಕರು ಅರ್ಥಮಾಡಿಕೊಳ್ಳಬೇಕು.

ಕಳೆದ ಸಹಸ್ರ ವರ್ಷದಲ್ಲಿ ಈ ದೇಶವು ಹಲವು ಬಾರಿ ಗುಲಾಮಗಿರಿಯನ್ನು ಅನುಭವಿಸಿದೆ. ಶಕರು, ಹೂಣರು, ಮೊಘಲರು, ಖಿಲ್ಜಿ, ಬಹಮನಿ, ಫ್ರೆಂಚರು, ಪೋರ್ಚುಗೀಸರು ಕೊನೆಗೆ ಬ್ರಿಟಿಷರು ಹೀಗೆ ಈ ದೇಶದ ಸ್ವತ್ವ ಸಂಸ್ಕೃತಿಗಳನ್ನು ನಾಶಪಡಿಸಲು ಯತ್ನಿಸಿದವರಿಗೆ ಲೆಕ್ಕವೇ ಇಲ್ಲ. ಆದರಿದು ಅಮೃತ ಕಡೆದು ಕುಡಿದ ನಾಡು. ಅವರಿಗೆ ಅಲ್ಪ ಸ್ವಲ್ಪ ಯಶಸ್ಸು ಸಿಕ್ಕಿರಬಹುದು. ಆದರೆ ಪೂರ್ಣವಾಗಿ ನಾಶಗೊಳಿಸಲು ಸಾಧ್ಯವಾಗಲಿಲ್ಲ. ಕಾರಣ ನಮ್ಮ ಅಂದಿನ ಶಿಕ್ಷಣ ವ್ಯವಸ್ಥೆ. ಈ ಶಿಕ್ಷಣದ ಚಟುವಟಿಕೆ, ದೇಶದ ಬೌದ್ಧಿಕ ಹಾಗೂ ನೈತಿಕ ಸಂಸ್ಕೃತಿಗಳ ನಿಜವಾದ ಆಧಾರವಾಗಿದ್ದುದಲ್ಲದೆ, ದೇಶದ ಪ್ರಾಪಂಚಿಕ ಪ್ರಗತಿಯ ಅಡಿಗಲ್ಲೂ ಆಗಿತ್ತು. ಅನೇಕ ಶತಮಾನಗಳವರೆಗೆ, ರಾಜಕೀಯ ಕ್ಷೇತ್ರದಲ್ಲಿ ಅಥವಾ ಆಳಿದ ರಾಜವಂಶಗಳಲ್ಲಿ ಎಷ್ಟೇ ಬದಲಾವಣೆಗಳಾದರೂ, ಶಿಕ್ಷಣ ಕ್ರಮವು ಒಂದೇ ರೀತಿ ಮುಂದುವರೆಯುತ್ತಿತ್ತು. ಏಕೆಂದರೆ, ಶಿಕ್ಷಣವು ಸಮಾಜದ ಸಾಧನೆಯಾಗಿತ್ತು. ಇದರಿಂದ ಶಿಕ್ಷಣ ಸಂಪ್ರದಾಯವು ಮುಂದುವರೆಯಲು ಸಹಾಯಕವಾಯಿತು. ಶಿಕ್ಷಣ ವ್ಯವಸ್ಥೆಯು ವಿಕೇಂದ್ರೀಕೃತವಾಗಿತ್ತು ಮತ್ತು ಅದು ರಾಜಕೀಯ ಆಜ್ಞೆಗಾಗಲೀ, ಅಧೀನಕ್ಕಾಗಲಿ ಒಳಗಾಗಿರಲಿಲ್ಲ. ನಮ್ಮ ಸಂಸ್ಕೃತಿ ಸಭ್ಯತೆಗಳು ಗ್ರಾಮ ಗ್ರಾಮಗಳಿಗೆ ವಚನಗಳ ರೂಪದಲ್ಲಿ, ಗಾದೆಗಳ ರೂಪದಲ್ಲಿ, ಹರಿಕಥೆಯ ರೂಪದಲ್ಲಿ, ಜಾನಪದರ ಗೀತೆಗಳಲ್ಲಿ, ಸಾಧು ಸಂತರ ಪ್ರವಚನಗಳಲ್ಲಿ, ದಾಸರ ಪದಗಳ ಮೂಲಕ ಹರಡಿತು. ಓದು ಬರಹಬಲ್ಲದವನಿಗೂ ರಾಮಾಯಣ, ಮಹಾಭಾರತಗಳ ಅರಿವಿತ್ತು. ಭಗೀರಥ, ಶಿಬಿ, ಕರ್ಣ ಧರ್ಮರಾಯರ ಕಥೆಗಳ ಮೂಲಕ ತ್ಯಾಗ, ದಾನಧರ್ಮಗಳ ಅರ್ಥ ತಿಳಿದಿತ್ತು. ಅದು ಜನ ಸಾಮಾನ್ಯರ ಆಚರಣೆಯಲ್ಲೂ ಇತ್ತು. ಹೀಗಾಗಿ ಅವರಿಗೆ ಧರ್ಮ ಅಧರ್ಮಗಳ ವ್ಯತ್ಯಾಸ ತಿಳಿದಿತ್ತು. ಆದ್ದರಿಂದಲೇ ಹಿರಣ್ಯಕಶಿಪು – ಹಿರಣ್ಯಾಕ್ಷ, ರಾವಣ–ಕುಂಭಕರ್ಣ, ದುರ್ಯೋಧನ–ದುಶ್ಯಾಸನರ ಹೆಸರುಗಳನ್ನು ಯಾರೂ ತಮ್ಮ ಮಕ್ಕಳಿಗೆ ಇಟ್ಟಿದ್ದನ್ನು ನಾವು ಓದೂ ಇಲ್ಲ, ತಿಳಿದೂ ಇಲ್ಲ. ಇದಕ್ಕೆ ಮುಖ್ಯವಾದ ಕಾರಣ ಅಂದಿನ ಶಿಕ್ಷಣ ಕೇಂದ್ರಗಳಾಗಿದ್ದ ಘಟಿಕಗಳು, ಅಗ್ರಹಾರಗಳು, ಮಠಗಳು ಮತ್ತು ದೇವಸ್ಥಾನಗಳಲ್ಲಿ ನೀಡುತ್ತಿದ್ದ ಶಿಕ್ಷಣ. ಕರ್ನಾಟಕದಲ್ಲಂತು ಶಿವಮೊಗ್ಗ ಜಿಲ್ಲೆಯ ತಾಳಗುಂದ, ಚಾಲುಕ್ಯರ ಬಾದಾಮಿ, ಐಹೊಳೆ ಅಗ್ರಹಾರಗಳಲ್ಲಿ ನೀಡುತ್ತಿದ್ದ ಶಿಕ್ಷಣ ಕ್ರಮ ಕೇವಲ ವಿದ್ವಾಂಸರನ್ನು ಅಷ್ಟೇಅಲ್ಲದೆ ಸಾಮಾನ್ಯ ಜನರನ್ನು ಉತ್ತಮ ನಾಗರೀಕರನ್ನಾಗಿಯೂ ರೂಪಿಸುತ್ತಿತ್ತು.

ಸ್ವತಂತ್ರ ಭಾರತದಲ್ಲಿ ಶಿಕ್ಷಣ ಸಾರ್ವತ್ರೀಕರಣವಾಗಿದೆ. ಶಿಕ್ಷಣ ಇಲಾಖೆಯನ್ನು ಕರೆಯುವುದೇ "ಸಾರ್ವಜನಿಕ ಶಿಕ್ಷಣ ಇಲಾಖೆ" ಎಂದು. ಶಿಕ್ಷಕರ ಸಂಖ್ಯೆ ಅಪಾರವಾಗಿದೆ. ಪ್ರತಿವರ್ಷ ಲಕ್ಷಗಟ್ಟಲೆ ವಿದ್ಯಾರ್ಥಿಗಳು ಶಾಲೆಗಳಿಂದ ಹೊರಬರುತ್ತಾರೆ. ಲಕ್ಷಾಂತರ ಇಂಜಿನೀಯರುಗಳು, ಡಾಕ್ಟರ್‌ಗಳು, ಲಾಯರ್‌ಗಳು ಮುಂತಾದ ಶಿಕ್ಷಣ ಪಡೆದವರು ಸಮಾಜದ ಮುಖ್ಯ ಧಾರೆಗೆ ಸೇರುತ್ತಾರೆ. ಆದರೆ ಇವರಲ್ಲಿ ಎಷ್ಟು ಜನ ದೇಶ ಧರ್ಮದ ಬಗ್ಗೆ, ಸಮಾಜದ ಬಗ್ಗೆ ಕಾಳಜಿ ವಹಿಸುತ್ತಾರೆ. ಭ್ರಷ್ಟಾಚಾರಿಗಳೆಂದು ಸಮಾಜ ಗುರುತಿಸುವವರೆಲ್ಲ ಶಿಕ್ಷಿತರೇ ಅಲ್ಲವೇ? ಇವರನ್ನೆಲ್ಲ ಸುಶಿಕ್ಷಿತರೆಂದು ಗುರುತಿಸುವುದೇ ಅವಮಾನಕರ, ಇವರು ಕೇವಲ ಅಕ್ಷರಸ್ಥರು ಮಾತ್ರ.

ತನ್ನ ಆಟೋದಲ್ಲಿ ಬಿಟ್ಟುಹೋದ ಹಣದ ಆಭರಣಗಳ ಗಂಟನ್ನು ಮಾಲೀಕರಿಗೆ ತಲುಪಿಸುವವ ಶಿಕ್ಷಿತ. ರಸ್ತೆಯಲ್ಲಿ ಸಿಕ್ಕ ಪರ್ಸ್ ಅನ್ನು ಲಪಟಾಯಿಸದೆ ಪೋಲೀಸ್ ಠಾಣೆಗೆ ತಂದು ಒಪ್ಪಿಸುವ ಹಳ್ಳಿಮುಕ್ಕ ಶಿಕ್ಷಿತ. ಸರ್ಕಾರೀ ಕಛೇರಿಯಲ್ಲಿ ಕೆಲಸ ಮಾಡುವವರು, ಶಿಕ್ಷಣ ಇಲಾಖೆಯ ನೌಕರರು, ಅಧಿಕಾರಿಗಳು, ಪೊಲೀಸ್ ಇಲಾಖೆ, ತೆರಿಗೆ ಇಲಾಖೆಯವರು, ಇನ್ನೂ ಹೇಳಬೇಕೆಂದರೆ ಸಾರಾಸಗಟು ಪದವೀಧರರೆಲ್ಲರೂ ಶಿಕ್ಷಿತರೇ ಅಥವಾ ಅಕ್ಷರಸ್ಥರೇ?

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದವರೆಲ್ಲರದ್ದೂ ಒಂದು ಕನಸಿತ್ತು. ಭಾರತ ಬಂಧಮುಕ್ತವಾಗಿ ಸ್ವಯಂ ಆಡಳಿತ ಹೊಂದುವುದು, ಆ ಕನಸಿನ ಒಂದು ಭಾಗ. ಅದರ ಬಹುಭಾಗ, ಲೋಕಮಾನ್ಯ ಬಾಲಗಂಗಾಧರ ತಿಲಕರ ಮಾತಿನಲ್ಲಿ "ಧರ್ಮಾಧಾರಿತ ದೇಶಕಟ್ಟುವುದು", ಯೋಗಿ ಅರವಿಂದರ ಚಿಂತನೆಯಂತೆ, ಧರ್ಮ ಈ ದೇಶದ ಪ್ರಾಣ ಅದಕ್ಕಾಗಿ ನಮ್ಮ ಪ್ರಾಚೀನ ಪರಂಪರೆ ಅನುಗುಣವಾಗಿ ದೇಶ ಕಟ್ಟುವುದು. ಇದೆಲ್ಲಕ್ಕೂ ಮಿಗಿಲಾಗಿ ಗಾಂಧೀಜಿಯವರ 'ರಾಮ ರಾಜ್ಯ'ದ ಕನಸು ಗಾಂಧೀಜಿಯವರ ಕನಸಿನ ಭಾರತದಲ್ಲಿ ಗೋಹತ್ಯೆಗೆ ಸ್ಥಾನವಿಲ್ಲ, ಪಾನ ನಿರೋಧಕ್ಕೆ ಆದ್ಯತೆ, ಗುಡಿಕೈಗಾರಿಕೆ ಅಭಿವೃದ್ಧಿ ಅಡಿಗಲ್ಲು. ಒಟ್ಟಾರೆ ರಾಮರಾಜ್ಯವನ್ನು ಧರೆಗಿಳಿಸುವುದು.

ಈ ಹಿನ್ನಲೆಯಲ್ಲಿ ಕಳೆದ 75 ವರ್ಷಗಳ ಸಿಂಹಾವಲೋಕನ ಮಾಡಿದಾಗ ನಾವು ನಿಜವಾಗಿ ಸ್ವತಂತ್ರರಾಗಿದ್ದೇವೆಯೇ ಎಂದು ಯೋಚಿಸಬೇಕಿದೆ. "ಸ್ವತಂತ್ರ ಎಂಬ ಶಬ್ದದಲ್ಲಿ 'ಸ್ವ' ಎಂಬ ಪದಕ್ಕೆ ವಿಶೇಷವಾದ ಅರ್ಥವಿದೆ. 'ಸ್ವ' ನಲ್ಲಿ ಈ ನಾಡಿನ ಸಂಸ್ಕೃತಿ, ಪರಂಪರೆ,

ಪುಟ 4 ಕ್ಕೆ ➤

➢ ಪುಟ 3 ರಿಂದ.....

ಆದರ್ಶಗಳು, ಜೀವಿತೋದ್ದೇಶಗಳು ಮುಂತಾದ ಎಲ್ಲ ಭಾವಗಳು ಮಿಳಿತವಾಗಿವೆ. ತಿಲಕರು, ಅರವಿಂದರು ಗಾಂಧೀಜಿ ಹಾಗೂ ಲಕ್ಷಾಂತರ ಸ್ವಾತಂತ್ರ್ಯ ಯೋಧರ ಕನಸುಗಳು ಸೇರಿದೆ.

ಕಳೆದ 70 ವರ್ಷಗಳಲ್ಲಿ ಈ ದೇಶದ 'ಸ್ವತ್ವ'ದ ಜಾಗೃತಿಗೊಳಿಸುವ ಕೆಲಸವನ್ನು ಆಡಳಿತದ ಚುಕ್ಕಾಣೆ ಹಿಡಿದವರು ಮಾಡಿದರೇ? ಖಂಡಿತ ಇಲ್ಲ. ಬದಲಿಗೆ 'ಸ್ವತ್ವ'ಕ್ಕೆ ಶಾಶ್ವತ ಸಮಾಧಿಕಟ್ಟಿದರು. ನಮ್ಮ ಸಂವಿಧಾನದಲ್ಲಿ ಸ್ವತ್ವವು ಪ್ರಕಟಗೊಂಡಿಲ್ಲ. ತಿಲಕರು ಧರ್ಮಾಧಾರಿತ ದೇಶವಾಗಬೇಕೆಂದರೆ ಆಡಳಿತ ನಡೆಸಿದವರು ಧರ್ಮಾತೀತ ಎಂದರು. ಗಾಂಧೀಜಿ ರಾಮ ರಾಜ್ಯವೆಂದರೆ ಅವರ ಹಿಂಬಾಲಕರು ರಾವಣ ರಾಜ್ಯ ನಿರ್ಮಿಸಿದರು. ಅವರ ಗ್ರಾಮ ರಾಜ್ಯ, ಗೋಹತ್ಯೆ ನಿಷೇಧ, ಪಾನನಿರೋಧದ ಆಸೆಗಳನ್ನು ಮಣ್ಣೂಗಿಸಿದರು. ಅಧಿಕಾರದ ಏಣಿ ಏರಲು ಗಾಂಧಿಯ ಹೆಸರು ಬಳಸಿದರೇ ಹೊರತು ಅವರ ಆದರ್ಶಗಳನ್ನು ಕಿಂಚಿತ್ತು ಪಾಲಿಸಲಿಲ್ಲ.

ಇದೀಗ ಮೋದಿಯವರು ಅಮೃತ ಮಹೋತ್ಸವದ ಹೊಸ್ತಿಲಲ್ಲಿ ನಿಂತು, ಅಮೃತ ಕಾಲದ ಕನಸು ಬಿತ್ತುತ್ತಿದ್ದಾರೆ. ಇನ್ನಿಪ್ಪತ್ತೈದು ವರ್ಷಗಳಲ್ಲಿ ಭಾರತ ಸಶಕ್ತ, ಸದೃಢ, ಸಾಮಾಜಿಕಸಮರಸತೆಯ ನಾಡಾಗಿ ಜಗತ್ತಿಗೆ ಮಾರ್ಗದರ್ಶಕವಾಗಬೇಕೆಂಬ ಕನಸಿದು. ಯಾರಿದನ್ನು ಸಾಕಾರಗೊಳಿಸುವವರು? ಮತ್ತದೇ ವಿಚ್ಛಿದ್ರಕಾರ ಘಟಸರ್ಪಗಳು ತಲೆ ಎತ್ತುತ್ತಿವೆ. ಅಖಂಡವಾಗಬೇಕಾದ ಸಮಾಜವನ್ನು ಛಿದ್ರಮಾಡಲು ಹೊರಟಿವೆ. ದೇಶದ್ರೋಹಿ ಹಾವುಗಳಿಗೆ ಹಾಲೆರೆಯತ್ತಿವೆ. ದೇಶದ 'ಸ್ವ' ದ ಬಗ್ಗೆ ಚಿಂತಿಸಿದೇ ವೈಯುಕ್ತಿಕ, ಪರಿವಾರದ 'ಸ್ವ' ದ ಬಗ್ಗೆ ಚಿಂತಿಸುತ್ತಿದೆ. ತಮ್ಮ ಅಧಿಕಾರದಾಹ ತಣಿಸಿಕೊಳ್ಳಲು ಕೌರವ ಶಕ್ತಿಳೆಲ್ಲ ಒಗ್ಗೂಡುತ್ತಿವೆ. ಇದೀಗ ಭಾರತಕ್ಕೆ ಒಂದು ಸಂಧಿಕಾಲ. ಈ ಸಂಧಿಕಾಲದಲ್ಲಿ ಇರುವ ನಾವುಗಳು ಎಚ್ಚೆತ್ತುಗೊಂಡು ಪಾಂಡವ ಶಕ್ತಿಯನ್ನು ಜಾಗೃತಗೊಳಿಸಬೇಕು. ಈ ಪರ್ವಕಾಲದಲ್ಲಿ ನಮ್ಮೆಲ್ಲ ಶಿಕ್ಷಕರಿಗೆ ಇದೇ ಕಾಲನ ಕರೆ. ನಮ್ಮ ಬೆನ್ನಿಗಿರಬೇಕಾದ ಹೊರೆ.

ಈ ಸ್ವಾತಂತ್ರ್ಯ ದಿನದಂದು ಈ ಮೇಲಿನ ಅಂಶಗಳನ್ನು ಕುರಿತು ನಾವು ಯೋಚಿಸಬೇಕಲ್ಲವೇ? ಜಾಗೃತರಾಗಬೇಕಲ್ಲವೇ? ಈ ಸಮಯದಲ್ಲಿ 1948ರಲ್ಲಿ ನಮ್ಮ ನಾಡಿನ ಶ್ರೇಷ್ಠ ಕವಿ ಎಂ. ಗೋಪಾಲಕೃಷ್ಣ ಅಡಿಗರು ರಚಿಸಿದ ಕವನವೊಂದು ನಮಗೆ "ಸಂಕಲ್ಪ ಗೀತೆ" ಆಗಬಲ್ಲದು. ಅದನ್ನು ಭಾವೀ ಜನಾಂಗವಾದ ನಮ್ಮ ಮಕ್ಕಳಿಗೆ ಬಾಯಿ ಪಾಠ ಮಾಡಿಸೋಣವೇ?

## ಕಟ್ಟುವೆವು ನಾವು

ಕಟ್ಟುವೆವು ನಾವು ಹೊಸ ನಾಡೊಂದನು,–
ರಸದಬೀಡೊಂದನು

ಹೊಸನೆತ್ತರುಕ್ಕುಕ್ಕಿ ಆರಿಹೋಗುವ ಮುನ್ನ,
ಹರೆಯದೀ ಮಾಂತ್ರಿಕನ ಮಾಟ ಮುಸುಳುವ ಮುನ್ನ, ಉತ್ಸಾಹ
ಸಾಹಸದ ಉತ್ತುಂಗ ವೀಚಿಗಳ
ಈ ಕ್ಷುಬ್ಧ ಸಾಗರವು ಬತ್ತಿ ಹೋಗುವ ಮುನ್ನ
ಕಟ್ಟುವೆವು ನಾವು ಹೊಸ ನಾಡೊಂದನು।

ನಮ್ಮೆದೆಯ ಕನಸುಗಳೇ ಕಾಮಧೇನು
ಆದಾವು, ಕರೆದಾವು ವಾಂಛಿತವನು;
ಕರೆದ ಕೈಗಿಹುದೋ ಕನಸುಗಳ ಹರಕೆ;
ಗುರಿ ತಪ್ಪದೊಮ್ಮುಖದ ಬಯಕೆ ಬೆಂಬಲಕೆ।

ಜಾತಿ ಮತ ಭೇದಗಳ ಕಂದಕವು ಸುತ್ತಲೂ,
ದುರ್ಭೇದ್ಯವೆನೆ ಕೋಟಿಕೊತ್ತಲಗಳು;
ರೂಢಿ ರಾಕ್ಷಸನರಸುಗೈಯುವನು, ತೋಳ್ತಟ್ಟಿ
ತೊಡೆತಟ್ಟಿ ಕರೆಯುವನು ಸಂಗ್ರಾಮಕೆ।

ನಾವು ಹಿಂದೆಗೆವೆವೇ? ವೀರ ತರುಣರು ನಾವು।
ಒಂದೆ ನೆಗೆತಕೆ ನೆಗೆವೆವೋ ಕಂದಕವನು,
ಕುಟ್ಟಿ ಪುಟಿಮಾಡುವೆವು ಕೋಟೆಗಳನು,
ಎದೆಯ ಮೆಟ್ಟಿ ಮುರಿಯುವೆವಸುರರಟ್ಟೆಗಳನು॥

ಕೋಟೆಗೋಡೆಗೆ ನಮ್ಮ ಹೆಣಗಳೇ ಮೆಟ್ಟಿಲು,
ನಮ್ಮ ಸಾವೇ ನೋವೆ ಹೊಸ ನಾಡ ತೊಟ್ಟಿಲು
ಆದಾವು; ಅಂಜುವೆದೆ ನಮ್ಮದಲ್ಲ;
ಸೋಲುಬಗೆ ವೀರನಿಗೆ ಸಲ್ಲ, ಹೊಲ್ಲ।

ಎಡರುಗಳ ಕಡಲುಗಳನೀಸಿ ಬರುವೆವು, ಘೋರ
ನೈರಾಶ್ಯದಗ್ನಿಮುಖದಲ್ಲು ಕೂಡ
ಹೊಕ್ಕು ಹೊರಡುವೆವೆಲ್ಲ ತೊಡಕುಗಳ ಒಡಕುಗಳ
ಬಿಡಿಸಿ, ಇಡಿಗೊಳಿಸಿ ಕಟ್ಟುವೆವು ನಾಡ।

ಇಂದು ಬಾಳಿದು ಕೂಳ ಕಾಳಗವು; ಹೊಟ್ಟೆಯೇ
ಕೇಂದ್ರವಾಗಿದೆ ನರನ ಜೀವಿತಕ್ಕೆ;
ಅನ್ನದನ್ಯಾಯದಾವಾಗ್ನಿಯಲಿ ಕರಗುತಿದೆ
ನರತೆ, ಸಂಸ್ಕೃತಿ, ಪ್ರೀತಿ, ದಿವದ ಬಯಕೆ।

ಇರುವೆಲ್ಲವನು ಎಲ್ಲ ಜನಕೆ ತೆರವಾಗಿಸುವ
ಸಮಬಗೆಯ ಸಮಸುಖದ ಸಮದುಃಖದ
ಸಾಮರಸ್ಯದ ಸಾಮಗಾನಲಹರಿಯ ಮೇಲೆ
ತೇಲಿ ಬರಲಿದೆ ನೋಡು, ನಮ್ಮ ನಾಡು।

ಇಲ್ಲೇ ಈ ಎಡೆಯಲ್ಲೆ, ನಮ್ಮ ಮುಂಗಡೆಯಲ್ಲೆ,
ಅಳಲುಗಳ ಹೆಡೆಯಲ್ಲೆ, ಸೋಲುಗಳ ತೊಡೆಯಲ್ಲೆ
ಅರಳೀತು ನಮ್ಮ ನಾಡು; ನಮ್ಮೆದೆಯ ತುಂಬಿರುವ ಅದರ
ನರಗಂಪು ಹೊರ ಹೊಮ್ಮುವುದ ಕಾದು ನೋಡು।

ಉತ್ಸಾಹ ಉದ್ವೇಗ ಉದ್ರೇಕಗಳ ವೀರ
ಯುವಜನದ ನಾಡ ಗುಡಿಯು;
ಅದರ ಹಾರಾಟಕ್ಕೆ ಬಾನೆ ಗಡಿಯು,
ಬರಲು ಬಿಡೆವೆಂದಿಗೂ ಅದಕೆ ತಡೆಯು।

ತಡೆವವರು ಬನ್ನಿರೋ, ಹೊಡೆವವರು ಬನ್ನಿರೋ
ಕೆಡೆನುಡಿದ ಕೆಡೆಬಗೆದ ಕೆಡುಕು ಜನರೇ ಬನ್ನಿ।
ಕೊಟ್ಟೆವಿದೋ ವೀಳೆಯವನು;
ನಿಮ್ಮೆಲರನು ತೊಡೆದು ನಿಮ್ಮ ಮಸಣದ ಮೇಲೆ

ಕಟ್ಟುವೆವು ನಾವು ಹೊಸ ನಾಡೊಂದನು,
ಸುಖದ ಬೀಡೊಂದನು

•

# ರಕ್ಷಾ ಬಂಧನ

**ಶ್ರೀಮತಿ ಲಕ್ಷ್ಮೀಸಿಂಗ್ ಬಿ.**
**ಶೈಕ್ಷಣಿಕ ಸಮಾಲೋಚಕರು, ಲೈಫ್‌ಕೋಚ್**
**ಸಂಪನ್ಮೂಲ ವ್ಯಕ್ತಿ (ಗಣಿತ), ಗಂಗಾನಗರ,**
**ಬೆಂಗಳೂರು –560 032**
**ದೂರವಾಣಿ ಸಂಖ್ಯೆ: 9980033636**



ಭಾರತೀಯರು ಹತ್ತು ಹಲವು ಹಬ್ಬಗಳನ್ನು ವರ್ಷಪೂರ್ತಿ ಆಚರಿಸುತ್ತಾರೆ. ಈ ಎಲ್ಲಾ ಪವಿತ್ರ ಹಬ್ಬಗಳಲ್ಲಿ ದೇವತಾರಾಧನೆ ಮುಖ್ಯವಾಗಿರುತ್ತದೆ. ಇಂತಹ ಹಬ್ಬಗಳ ಮಧ್ಯೆ 'ರಕ್ಷಾಬಂಧನ' ಒಂದು ವಿಶಿಷ್ಟ ರೀತಿಯ ಹಬ್ಬವಾಗಿದೆ.

ರಕ್ಷಾಬಂಧನವನ್ನು 'ರಾಖಿ' ಹಬ್ಬ ಎಂದೂ ಕೂಡ ಕರೆಯುತ್ತಾರೆ. ಜಾತಿ, ಮತ ಬೇಧವಿಲ್ಲದೆ ಆಚರಿಸುವ ಆಚರಣೆ ಎಂದರೂ ತಪ್ಪಾಗಲಾರದು.

ಶ್ರಾವಣ ಮಾಸದ ಶುಕ್ಲಪಕ್ಷದ ಪೂರ್ಣಿಮೆಯ ಉಪಾಕರ್ಮ ದಿನದಂದು 'ರಾಖಿ' ಹಬ್ಬವನ್ನು ಆಚರಿಸಲಾಗುತ್ತದೆ. ಸಹೋದರ– ಸಹೋದರಿಯರ ನಡುವೆ ಇರುವ ಅನುಬಂಧದ ದ್ಯೋತಕವಾಗಿ ಅಂದರೆ ಸಹೋದರ– ಸಹೋದರಿಯರ ವಾತ್ಸಲ್ಯದ ಸಂಬಂಧವನ್ನು ಬೆಸೆಯುವ ಮತ್ತು ಚಿರಕಾಲ ಉಳಿಸುವಂತೆ ಮಾಡುವ ಹಬ್ಬವೇ 'ರಕ್ಷಾಬಂಧನ'

## 'ರಕ್ಷಾಬಂಧನ' ಆಚರಣೆಯ ಹಿನ್ನಲೆ

**ಪೌರಾಣಿಕ ಹಿನ್ನೆಲೆ:** ರಕ್ಷಾಬಂಧನದ ಆಚರಣೆಯ ಕುರಿತು ಹಲವಾರು ದಂತಕತೆಗಳು ಇವೆ. ಅದರಲ್ಲಿ ಒಂದು ಹೀಗಿದೆ.

ಹಿಂದೂ ಪುರಾಣದ ಪ್ರಕಾರ ಮಹಾಕಾವ್ಯವಾದ ಮಹಾಭಾರತದಲ್ಲಿ ಶ್ರೀಕೃಷ್ಣ ಕುರಿತಾದ ಒಂದು ಪ್ರಸಂಗವಿದೆ. ಒಂದು ಸಂದರ್ಭದಲ್ಲಿ ಶ್ರೀ ಕೃಷ್ಣನ ಮಣಿಕಟ್ಟಿಗೆ(ಕೈಗೆ) ಗಾಯವಾಗಿ ರಕ್ತ ಸೋರುತ್ತಿರುತ್ತದೆ, ಆಗ ರುಕ್ಮಿಣಿಯು ಔಷಧಿಗಾಗಿ ಸೇವಕರನ್ನು ಕಳುಹಿಸಿ ಕಳವಳದಿಂದ ಕಾಯುತ್ತಾ ನಿಂತಿದ್ದಾಗ, ಅಲ್ಲಿಯೇ ಇದ್ದ ಪಂಚಪಾಂಡವರ ಪತ್ನಿಯಾದ ದ್ರೌಪದಿಯು ತಕ್ಷಣವೇ ತಾನು ಉಟ್ಟಿದ್ದ ಸೀರೆಯ ಸೆರಗಿನ ಅಂಚನ್ನು ಹರಿದು ಶ್ರೀ ಕೃಷ್ಣನ ಮಣಿಕಟ್ಟಿಗೆ ಕಟ್ಟಿ, ರಕ್ತ ಹರಿಯುವುದನ್ನು ನಿಲ್ಲಿಸುತ್ತಾಳೆ. ದ್ರೌಪದಿಯ ವಾತ್ಸಲ್ಯ ಮತ್ತು ಸಹೋದರಿ ರೀತಿಯ ಸಹಜ ಕಾಳಜಿಯನ್ನು ಕಂಡ ಕೃಷ್ಣ ಆಕೆಗೆ ಯಾವತ್ತೂ ರಕ್ಷಣೆಯನ್ನು ಕೊಡುವುದಾಗಿ ಅಭಯ ನೀಡುತ್ತಾನೆ ಮತ್ತು ಅದರಂತೆ ಮುಂದೆ ನಡೆದ ದ್ರೌಪದಿ ವಸ್ತ್ರಾಪಹರಣ ಸಂದರ್ಭದಲ್ಲಿ ದ್ರೌಪದಿಯ ಸೀರೆಯನ್ನು ಅಕ್ಷಯವನ್ನಾಗಿಸಿ ಸಹೋದರ ರೀತಿಯ ಜವಾಬ್ದಾರಿಯುತ ರಕ್ಷಣೆಯನ್ನು ಒದಗಿಸಿ ಅವಳ ಮಾನವನ್ನು ಕಾಪಾಡುತ್ತಾನೆ.

ಹೀಗೆ ಸಹೋದರ–ಸಹೋದರಿಯ ಸಂಬಂಧದ ಮಹತ್ವವನ್ನು ಈ ಪ್ರಸಂಗ ಎತ್ತಿ ಹಿಡಿಯುತ್ತದೆ ಮತ್ತು ಅಂದಿನಿಂದಲೇ 'ರಕ್ಷಾಬಂಧನ'ದ ಆಚರಣೆ ಶುರುವಾಯಿತು ಎಂಬ ನಂಬಿಕೆ ಇದೆ.

**ಚಾರಿತ್ರಿಕ ಹಿನ್ನಲೆ :** ಕ್ಷತ್ರಿಯರಲ್ಲಿ ರಕ್ಷಾಬಂಧನವೂ ಬಹಳ ಪ್ರಾಮುಖ್ಯತೆಯನ್ನು ಪಡೆದಿದೆ. ರಜಪೂತರಲ್ಲಂತೂ ಈ ಹಬ್ಬಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ.

ಮೇವಾಡದ ರಾಣಿ ಕರ್ಣಾವತಿ ಮತ್ತು ಮೊಗಲ್ ರಾಜನಾದ ಹುಮಾಯುನ್‌ನ ನಡುವೆ ಬರುವ 'ರಾಖಿ'ಯ ಪ್ರಸಂಗ ಇಂದಿಗೂ ಕೂಡ ಚಾರಿತ್ರಾರ್ಹ ವಿಷಯವಾಗಿದೆ. ಕೆಲವರ ಪ್ರಕಾರ ರಾಣಿ ಕರ್ಣಾವತಿ, ಗುಜರಾತ್‌ನ ರಾಜ 'ಬಹದ್ದೂರ್ ಶಾ' ತನ್ನ ರಾಜ್ಯದ ಮೇಲೆ ಯುದ್ಧಕ್ಕಾಗಿ ಬಂದಾಗ ತನ್ನ ಬಳಿ ಇದ್ದ ಚಿಕ್ಕ ಸೈನ್ಯದಿಂದ ಅವನನ್ನು ಎದುರಿಸಲು ಸಾಧ್ಯವಾಗದೆ, ಮೊಗಲ್ ರಾಜನಾದ ಹುಮಾಯುನ್‌ನ ಸಹಾಯವನ್ನು ಬಯಸಿ ರಾಖಿಯನ್ನು ಅವನಿಗೆ ಕಳುಹಿಸುವ ಮೂಲಕ ತನ್ನ ರಾಜ್ಯದ ರಕ್ಷಣೆಯನ್ನು ಕೋರುತ್ತಾಳೆ. ಅದರಂತೆ ಹುಮಾಯುನ್ ಸಹೋದರ ಸಮಾನವಾಗಿ ತನ್ನನ್ನು ಭಾವಿಸಿ ಕಳುಹಿಸಿರುವ ರಾಖಿಯನ್ನು ಕಂಡು ಕರ್ಣಾವತಿಗೆ ರಕ್ಷಣೆಯನ್ನು ಕೊಡಲು ಮುಂದಾಗುತ್ತಾನೆ. ಆದರೆ ಕಾರಣಾಂತರಗಳಿಂದ ಸಮಯಕ್ಕೆ ಸರಿಯಾಗಿ ಮೇವಾಡಕ್ಕೆ ತಲುಪಲು ಆಗಲಿಲ್ಲ. ಇತ್ತ ಬಹದ್ದೂರ್ ಶಾ ಮೇವಾಡವನ್ನು ಆಕ್ರಮಿಸಿಕೊಳ್ಳುತ್ತಾನೆ. ನಂತರ ತಲುಪಿದ ಹುಮಾಯುನ್ ಯುದ್ಧದಲ್ಲಿ ಅವನನ್ನು ಸೋಲಿಸಿ, ಕರ್ಣಾವತಿಯ ಪುತ್ರ ವಿಕ್ರಮಸಿಂಹನಿಗೆ ರಾಜ್ಯವನ್ನು ಒಪ್ಪಿಸಿ ರಕ್ಷಾಬಂಧನದ ಕರ್ತವ್ಯವನ್ನು ಮಾಡುತ್ತಾನೆ. ರಾಖಿಗೆ ಗೌರವವನ್ನು ಈ ರೀತಿಯಾಗಿ ಸಲ್ಲಿಸುತ್ತಾನೆ.

ಕೇವಲ ಜೊತೆಯಲ್ಲಿ ಹುಟ್ಟಿದರೆ ಮಾತ್ರ ಸಹೋದರ– ಸಹೋದರಿಯಾಗುವುದಿಲ್ಲ. ಯಾರು ತಮಗೆ ರಕ್ಷಣೆಯನ್ನು ಮತ್ತು ಕಾಳಜಿ, ಗೌರವವನ್ನು ಕೊಡುತ್ತಾರೋ ಅವರೂ ಕೂಡ ಸಹೋದರ– ಸಹೋದರಿ ಸಮಾನರು ಎಂಬ ಸಂದೇಶವನ್ನು ಈ ಹಿನ್ನೆಲೆ ತಿಳಿಸುತ್ತದೆ.

ಇನ್ನೊಂದು ಘಟನೆ ಹೀಗಿದೆ. ಸ್ವಾತಂತ್ರ್ಯ ಹೋರಾಟಗಾರ ಮತ್ತು ಭಾರತದ ಮೇರು ಕವಿಗಳಲ್ಲಿ ಒಬ್ಬರಾದ ರವೀಂದ್ರನಾಥ ಟಾಗೂರ್‌ರವರು ಬ್ರಿಟಿಷರ ಡಿವೈಡ್ ಆಂಡ್ ರೂಲ್ ಪಾಲಿಸಿಯಿಂದ ಹಿಂದೂ ಮತ್ತು ಮುಸ್ಲಿಮರ ಮಧ್ಯೆ ಬಿಗಡಾಯಿಸಿದ ಸಂಬಂಧವನ್ನು

**ಪುಟ 9 ಕ್ಕೆ ➤**

# 'ಗುರು' ಎಂದರೆ ಯಾರು?



ನಂ. ನಾಗಲಕ್ಷ್ಮಿ
ನಿವೃತ್ತ ಕನ್ನಡ ಉಪನ್ಯಾಸಕರು,
ಸರ್ಕಾರಿ ಪ.ಪೂ. ಕಾಲೇಜು,
ಬೆಂಗಳೂರು

ಇದೀಗ ತಾನೇ ವ್ಯಾಸ ಪೂರ್ಣಿಮೆಯನ್ನು/ ಗುರುಪೂರ್ಣಿಮೆಯನ್ನು ಆಚರಿಸುವ ಮೂಲಕ ಗುರುವಂದನೆಯನ್ನು ಸಲ್ಲಿಸಿದ್ದೇವೆ. ಇದು ಪ್ರತಿಯೊಬ್ಬ ಶಿಷ್ಯನೂ ಗುರುವಿಗೆ ಅರ್ಪಿಸಲೇಬೇಕಾದ ಗೌರವ ಮತ್ತು ಕೃತಜ್ಞತೆ. 'ವರ್ಣಮಾತ್ರಂಕಲಿಸಿದಾತಂಗುರು' ಎಂಬ ಸೂಕ್ತಿಯಂತೆ ನಾವು ಕಲಿತ, ಕಲಿಯುವ ವಿದ್ಯೆಯು ಶಾಲಾಶಿಕ್ಷಣದ ಯಾವುದೇ ಹಂತದಲ್ಲಿಯಾಗಿದ್ದರೂ, ಎಷ್ಟೇ ಅವಧಿ ಮತ್ತು ಪ್ರಮಾಣದಲ್ಲಿದ್ದರೂ, ಅದನ್ನು ಕಲಿಸಿದವರು ನಮಗೆ ಪೂಜನೀಯರೇ ಆಗಿರುತ್ತಾರೆ.

ಅವರು ನೀಡುವ ಮಾರ್ಗದರ್ಶನ, ಪ್ರೋತ್ಸಾಹ, ಸದೃಢವೂ, ಆರೋಗ್ಯಕರವೂ ಆಗಿ ಶಿಷ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಅವರು ವಹಿಸುವ ಕಾಳಜಿ ಎಲ್ಲವೂ ಗುರು ಶಿಷ್ಯರೆಂಬ ಅನುಬಂಧವನ್ನು ಗಟ್ಟಿಗೊಳಿಸುತ್ತದೆ, ಮತ್ತು ಅದರ ಮಹತ್ವವನ್ನು ನಿರೂಪಿಸುತ್ತದೆ. ಏಕೆಂದರೆ ಶಿಷ್ಯನ ಬಗ್ಗೆ ಗುರುವಿನ ಜವಾಬ್ದಾರಿಯು ಕೇವಲ ಶಾಲೆಯ ತರಗತಿಯಲ್ಲಿ, ನಾಲ್ಕು ಗೋಡೆಗಳ ನಡುವಿನ ಪರಿಸರಕ್ಕೆ ಮಾತ್ರ ಸೀಮಿತವಾಗಿರುವುದಿಲ್ಲ. ಶಿಕ್ಷಣಕ್ಕೆ ಸಂಬಂಧಿಸಿದ್ದಲ್ಲದೆ ಯಾವುದೇ ಬಗೆಯ ವೈಯಕ್ತಿಕವಾದ ಸಮಸ್ಯೆಯಿದ್ದರೂ ಸಹ ಗುರುವಾದವರು ತಮ್ಮ ಸಲಹೆ, ಸಹಕಾರಗಳ ಮೂಲಕ ನೆರವಿನ ಹಸ್ತವನ್ನು ಚಾಚಬೇಕಾಗುತ್ತದೆ. ಅದು ಅವರ ಜವಾಬ್ದಾರಿಯಾಗಿರುತ್ತದೆ. ಅಂದರೆ ಇಬ್ಬರ ಪರಸ್ಪರ ಸಂಬಂಧ ಅಷ್ಟರ ಮಟ್ಟಿಗೆ ಗಾಢವಾಗಿರಬೇಕಾಗುತ್ತದೆ.

ನಮ್ಮ ಪುರಾಣ ಇತಿಹಾಸಗಳಲ್ಲಿ ಇಂತಹ ಪವಿತ್ರವಾದ ಸಂಬಂಧವನ್ನು ಹೊಂದಿದ್ದ ಅನೇಕ ಗುರು ಶಿಷ್ಯರ ವಿಚಾರಗಳನ್ನು ಬಹಳಷ್ಟು ಸಂದರ್ಭಗಳಲ್ಲಿ ತಿಳಿಯುತ್ತೇವೆ. ಇಲ್ಲಿ ಶಿಷ್ಯನ ಶ್ರೇಷ್ಠತೆಯೊಂದಿಗೆ ಗುರುವಿನ ಅರ್ಹತೆಯೂ ಸಹ ಗಮನಕ್ಕೆ ಬರುತ್ತದೆ. 'ಗುರು' ಎಂಬ ಪದವಿಯನ್ನು ಹೊಂದುವುದು ಸುಲಭವಲ್ಲ.

ಏಕೆಂದರೆ ಅಕ್ಷರ ಕಲಿಸಿದವರೆಲ್ಲರೂ, ಪಾಠ ಹೇಳಿಕೊಟ್ಟವರೆಲ್ಲರೂ 'ಗುರು'ಗಳಾಗಲು ಸಾಧ್ಯವಿಲ್ಲ. ಕೇವಲ ವಿಷಯ ಜ್ಞಾನವನ್ನು ತುಂಬುವುದು ಮಾತ್ರವೇ ಆ ಸ್ಥಾನದಲ್ಲಿರುವವರ ಜವಾಬ್ದಾರಿಯಾಗಿರುವುದಿಲ್ಲ. ಶಿಷ್ಯನ ಮನಸ್ಸಿನಲ್ಲಿ ಒಂದು ಸ್ಥಾನವನ್ನು ಪಡೆಯಲು, ಅದೂ ಆತ್ಮೀಯವಾದ, ಆಪ್ತವಾದ ಸ್ಥಾನವನ್ನು ಪಡೆದುಕೊಳ್ಳುವ ಸವಾಲೂ ಇಲ್ಲಿರುತ್ತದೆ. ಇದರಲ್ಲಿ ಗೆಲ್ಲುವುದೂ ಕೂಡ ಸುಲಭವಲ್ಲ. ಇದನ್ನು ಪ್ರೀತಿಯಿಂದ ಒಪ್ಪಿಕೊಂಡು, ಜವಾಬ್ದಾರಿಯನ್ನು ನಿರ್ವಹಿಸುವವರಷ್ಟೇ ಇಲ್ಲಿ ಯಶಸ್ಸು ಹೊಂದುವುದು ಸಾಧ್ಯ.

ಇಂದು ಪಾಠ ಹೇಳಿಕೊಡುವವರಲ್ಲಿ ಎಷ್ಟು ಜನ ಈ ಅಂಶವನ್ನು ತಿಳಿದಿದ್ದಾರೆಂದು ಆಲೋಚಿಸುವುದು ಅಗತ್ಯ. ಕೇವಲ ಬೌದ್ಧಿಕ ಮಾಹಿತಿಗಳನ್ನು ತಿಳಿಸುವುದರತ್ತ ಗಮನಕೊಡದೆ ವಿದ್ಯಾರ್ಥಿಯ ಮನಸ್ಸಿನ ಆರೋಗ್ಯವನ್ನು ಕಾಪಾಡುವುದರತ್ತ ಕೂಡ ಅವರು ತಮ್ಮ ಹೊಣೆಯನ್ನು ನಿರ್ವಹಿಸಬೇಕಿದೆ. ಇಲ್ಲಿ ಶಿಸ್ತು ನೀಡದ ಫಲಿತಾಂಶವನ್ನು ನಾಲ್ಕು ಪ್ರೀತಿಯ ನುಡಿಗಳು ತರಬಲ್ಲವೆಂಬುದನ್ನು ಇಂದಿನ ಎಷ್ಟು ಜನ ಶಿಕ್ಷಕರು ತಿಳಿದಿದ್ದಾರೆ? ಕುವೆಂಪು ಅವರ ಒಂದು ರಚನೆಯಲ್ಲಿ ಬರುತ್ತದೆ, 'ಪ್ರೀತಿ ಇಲ್ಲದ ಮೇಲೆ ಹೂವು ಅರಳೀತು ಹೇಗೆ?' ಎಂದು.

ಮೈಸೂರು ವಿಶ್ವವಿದ್ಯಾಲಯದಲ್ಲಿ ಉಪಕುಲಪತಿಗಳಾಗಿದ್ದ ಎನ್. ಎಸ್. ಸುಬ್ಬರಾವ್. ಎಂಬುವವರು ಪರೀಕ್ಷೆಯ ದಿನಗಳಲ್ಲಿ ತಡವಾಗಿ ಬಂದ ವಿದ್ಯಾರ್ಥಿಗಳನ್ನು ನೇರವಾಗಿ ತಮ್ಮ ಕೊಠಡಿಗೆ ಕರೆದೊಯ್ದು ಕುಳ್ಳಿರಿಸಿ ಅಲ್ಲಿಯೇ ಪರೀಕ್ಷೆಗೆ ಬರೆಯಲು ಸೂಚಿಸುತ್ತಿದ್ದರಂತೆ. ವಿದ್ಯಾರ್ಥಿಗಳು ಆತಂಕ ರಹಿತರಾಗಿ ಪರೀಕ್ಷೆಯನ್ನು ಎದುರಿಸಲು ಅವರು ಹೀಗೆ ಸಹಕರಿಸುತ್ತಿದ್ದರಂತೆ. ಇದು ಅಂತಃಕರಣ ಹೊಂದಿದ ಗುರುವಿನ ನಡವಳಿಕೆ. ಶಿಸ್ತು, ನಿಯಮ ಪಾಲನೆಗಳ ಕಡೆಗಷ್ಟೇ ಗಮನನೀಡಬೇಕೆಂದು ಆಲೋಚಿಸುವ ಇಂದಿನ ಶಿಕ್ಷಕರಲ್ಲಿ ಎಷ್ಟು ಮಂದಿ ಈ ಭಾವವನ್ನು ಬೆಳೆಸಿಕೊಂಡಿರುತ್ತಾರೆ? ಮಕ್ಕಳ ಮನಸ್ಸು ಕೂಡ ಹಾಗೇ ತಾನೆ? ಹೂವಿನಂತೆ ಕೋಮಲವಾಗಿರುವ ಅವರ ಮನಸ್ಸು ಅಷ್ಟೇ ಮೃದುವಾಗಿ, ಸೂಕ್ಷ್ಮವಾಗಿ ವಿಕಾಸಗೊಳ್ಳಬೇಕಾದರೆ ಅವರೊಂದಿಗೆ ವ್ಯವಹರಿಸುವಾಗ ಅಷ್ಟೇ ಎಚ್ಚರಿಕೆ ವಹಿಸಬೇಕಾಗುತ್ತದೆ. ಏನನ್ನೇ ಕಲಿಯಲು ಮೊದಲಿಗೆ ಆ ವಿಷಯದ ಬಗೆಗೆ ಪ್ರೀತಿ, ಆಸಕ್ತಿ ಮೂಡಿಸಬೇಕು. ಅದನ್ನು ಬಲವಂತವಾಗಿ ಮೂಡಿಸುವುದು ಸಾಧ್ಯವಿಲ್ಲ. ಎರಡನೆಯದಾಗಿ ವಿದ್ಯಾರ್ಥಿಗೆ ತನಗೆ ಕಲಿಸುತ್ತಿರುವ ಶಿಕ್ಷಕರಲ್ಲಿ ನಂಬಿಕೆ, ಭರವಸೆ, ವಿಶ್ವಾಸ ಮೂಡುವಂತೆ ನಡೆದುಕೊಳ್ಳಬೇಕು. ತನ್ನ ಏನೇ ಸಮಸ್ಯೆ ಇದ್ದರೂ ಅವರಲ್ಲಿ ಹೇಳಿಕೊಳ್ಳುವಂತಹ ಆಪ್ತತೆ ಬೆಳೆದಿರಬೇಕು. ಅದು ಕಲಿಕೆಗೆ ಸಂಬಂಧಿಸಿದ್ದಾಗಿರಬಹುದು, ವೈಯಕ್ತಿಕವಾದುದಾಗಿರ ಬಹುದು, ಹಿರಿಯರಾಗಿ ಕಾಳಜಿವಹಿಸಿ, ತನಗೆ ಸೂಕ್ತ ರೀತಿಯಲ್ಲಿ ಮಾರ್ಗದರ್ಶನವಿತ್ತು ಸಹಕರಿಸುವರೆಂಬ ನಂಬಿಕೆ ಇದ್ದಾಗ ಮಾತ್ರ ಈ ಆಪ್ತತೆ ಬೆಳೆಯಲು ಸಾಧ್ಯ.

ಯಾರು ವಿದ್ಯಾರ್ಥಿಗಳಲ್ಲಿ ಈ ಭಾವವನ್ನು ಮೂಡಿಸುತ್ತಾರೋ ಅವರು 'ಗುರು' ಸ್ಥಾನವನ್ನು ಹೊಂದಲು ಸಾಧ್ಯ. ನಿಜವಾದ ಗುರು–ಶಿಷ್ಯ ಸಂಬಂಧ ಬೆಳೆಯುವುದು ಹೀಗೆ. ಅದು ಗಟ್ಟಿಯಾಗುವುದು ಈ ತಳಹದಿಯ ಮೇಲೆಯೇ. ಮನೆಯಲ್ಲಿ ತಾಯಿ, ತಂದೆ ಹೇಗೆ ಮಗುವಿನ ಎಲ್ಲ ವಿಚಾರಗಳ ಬಗೆಗೆ ಕಾಳಜಿ ವಹಿಸುತ್ತಾರೆಯೋ ಅದೇ ರೀತಿಯಲ್ಲಿ ಶಾಲೆಯಲ್ಲಿ ಕಲಿಸುವವರು ಇಂತಹ ಕಾಳಜಿ ವಹಿಸಬೇಕಾಗುತ್ತದೆ. ಅದರ ದೈಹಿಕ, ಮಾನಸಿಕ ವಿಚಾರ, ಬೆಳವಣಿಗೆ ಎಲ್ಲದರ ಕುರಿತು ಅವರ ಗಮನವಿರಬೇಕಾದುದು ಅಗತ್ಯ. ಇಲ್ಲಿ ಕೇವಲ ವ್ಯಾವಹಾರಿಕ ಸಂಬಂಧವಲ್ಲ, ಭಾವನಾತ್ಮಕ ಸಂಬಂಧವಿರಬೇಕು.

ವಿದ್ಯಾರ್ಥಿಯು ತನಗೆ ಕಲಿಸುವವರಲ್ಲಿ ಭರವಸೆ, ಪ್ರೀತಿ, ಗೌರವ ಮತ್ತು ಪೂಜ್ಯ ಭಾವವನ್ನು ಬೆಳೆಸಿಕೊಳ್ಳಲು ಆಗಲೇ ಸಾಧ್ಯವಾಗುವುದು. ವಿದ್ಯೆಯನ್ನು ಕಲಿಸುವುದೆಂದರೆ ಒಂದು ವ್ಯಾಪಾರವೇ ಆಗಿರುವ ಈ ದಿನಗಳಲ್ಲಿ ಇಂತಹ ಬಹುದೊಡ್ಡ ಬದಲಾವಣೆ ಅಗತ್ಯವಾಗಿದೆ. 'ಮಾತೃದೇವೋಭವ, ಪಿತೃದೇವೋಭವ' ದ ನಂತರ ಹೇಳುವ 'ಆಚಾರ್ಯದೇವೋಭವ' ಎಂಬುದನ್ನು ಅಭಿಮಾನದಿಂದ, ಅದಕ್ಕೂ ಹೆಚ್ಚಾಗಿ ನೈತಿಕತೆಯಿಂದ ಉದ್ಗರಿಸಲು 'ಕಲಿಸುವವರು' ಅರ್ಹರಾಗಬಹುದು. •

# ಸುಂದರ ಮಣಿಪುರದಲ್ಲಿಯ ಅನಾಗರಿಕ ಬೆಂಕಿ, ಬೇಗ ಆರಲಿ

**ಚಿದಾನಂದ ಆ. ಪಾಟೀಲ**
ರಾಜ್ಯ ಪ್ರಧಾನಕಾರ್ಯದರ್ಶಿ
ಕ.ರಾ.ಮಾ.ಶಿ.ಸಂ.



ನಿಸರ್ಗದ ರಮಣೀಯ ಸ್ಥಳ, ಸಸ್ಯರಾಶಿಗಳ ಆಗರ, ಐತಿಹಾಸಿಕವಾಗಿ ಮಹಾಭಾರತದಲ್ಲಿ ಹೆಸರಿಸಿದ ಪ್ರದೇಶ, ಜಗತ್ ಪ್ರಸಿದ್ಧ ಮಣಿಪುರಿ ನೃತ್ಯ ಎಂತಹವರನ್ನು ಮೂಕವಿಸ್ಮಯ ಗೊಳಿಸುವಂತಹದು. ಲೋಕಟಾಕ್ ಸರೋವರ, ಶಂಗ್ಲಾ ಅರಮನೆ ಮತ್ತು ಕೈಬುಲ್ ಲಾಮ್ ಜಾಮೋ ರಾಷ್ಟ್ರೀಯ ಉದ್ಯಾನವನಗಳೂ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಸಾಧನೆಯ ಶಿಖರವೇರಿದ ಎಂ.ಸಿ ಮೆರಿಕೋಮ್ ಮತ್ತು ಎಲ್. ಸರಿತದೇವಿಯವರ ಜನ್ಮಭೂಮಿ. ವಿಶ್ವದ ಅತಿ ಎತ್ತರದ ರೈಲು ನಿಲ್ದಾಣ ಬೋಗಿಯನ್ನು ತನ್ನಲ್ಲಿ ಇಟ್ಟುಕೊಂಡ ರಾಜ್ಯ. ಭಾರತದ ಸ್ವಾತಂತ್ರ್ಯದ ನಂತರ ಕೇಂದ್ರಾಡಳಿತ ಪ್ರದೇಶವಾಗಿದ್ದ ಮಣಿಪುರ 1972 ಜನವರಿ 21ರಂದು ರಾಜ್ಯವಾಗಿ ಹೊರಹೊಮ್ಮಿತು. ರಾಜ್ಯಸಭೆಯ –01 ಲೋಕಸಭೆಯ–02 ಮತ್ತು ರಾಜ್ಯ ವಿಧಾನ ಸಭೆಗೆ–60 ಕ್ಷೇತ್ರಗಳನ್ನು ಒಳಗೊಂಡಿದೆ. ಉತ್ತರಕ್ಕೆ ನಾಗಾಲ್ಯಾಂಡ್, ಪಶ್ಚಿಮಕ್ಕೆ ಅಸ್ಸಾಂ. ನೈರುತ್ಯಕ್ಕೆ ಮಿಜೋರಾಂ ರಾಜ್ಯಗಳ ಮತ್ತು ಮಯನ್ಮಾರ್ ದೇಶದೊಂದಿಗೆ ಗಡಿಯನ್ನ ಹಂಚಿಕೊಂಡ ರಾಜ್ಯ ಇದು.

ಈ ಸುಂದರ ರಾಜ್ಯ ಇತ್ತೀಚೆಗೆ ದೇಶವೇ ತಲೆ ತಗ್ಗಿಸುವಂತಹ ಘಟನೆಗಳಿಂದ ಕುಖ್ಯಾತಿ ಪಡೆಯುತ್ತಿದೆ. ಈ ರಾಜ್ಯದಲ್ಲಿಯ ಬಂಡಾಯ ಇಂದು ನಿನ್ನೆಯದಲ್ಲ. ಅದಕ್ಕೆ ಸುದೀರ್ಘ ಇತಿಹಾಸವಿದೆ. ಇಲ್ಲಿ ಪ್ರಮುಖವಾಗಿ ಮತೇಯಿ, ಕುರೆ ಮತ್ತು ನಾಗಾ, ಜೋಗಿ ಜನಾಂಗಗಳು ಇಲ್ಲಿ ವಾಸವಾಗಿವೆ. ಒಟ್ಟು ರಾಜ್ಯದಲ್ಲಿ 2011ರ ಜನಗಣತಿಯ ಪ್ರಕಾರ 28,55,794 ಜನಸಂಖ್ಯೆಯನ್ನು ಹೊಂದಿದೆ. ಒಟ್ಟು ಭೌಗೋಳಿಕವಾಗಿ 225327 ಚದುರ ಕಿ.ಮೀ ಭೂಪ್ರದೇಶವನ್ನು ಹೊಂದಿದೆ. ಇದರಲ್ಲಿ ಹೆಚ್ಚು ಭಾಗ ಅರಣ್ಯದಿಂದ ಕೂಡಿದೆ. ಇದರಲ್ಲಿ ನಾಗಾ, ಕುರು ಮತ್ತು ಜೋಮಿ ಬುಡಕಟ್ಟು ಜನಾಂಗಗಳು ಶೇಕಡಾ 45ರಷ್ಟಿದ್ದು, ಅವುಗಳು 90 ರಷ್ಟು ಭೂಪ್ರದೇಶದಲ್ಲಿ ವಾಸವಾಗಿದೆ. ಜನಸಂಖ್ಯೆಯ ಶೇಕಡಾ 55ರಷ್ಟಿರುವ ಮತೇಯಿಗಳು 10%ರಷ್ಟು ಭೂ ಪ್ರದೇಶದಲ್ಲಿ ವಾಸವಾಗಿದ್ದಾರೆ. ಕುಕಿ, ನಾಗಾ ಮತ್ತು ಜೋಮಿಗಳು ಎಸ್ಟಿ ವರ್ಗಕ್ಕೆ ಸೇರಿದ್ದರೆ ಮತೀಯಿಗಳು ಒಬಿಸಿ,ಎಸ್ಸಿ ಕ್ಯಾಟಗರಿಯಲ್ಲಿ ಇದ್ದಾರೆ. ಮಣಿಪುರದಲ್ಲಿ 371(ಜಿ) ಎನ್ನುವ ಕಾಯ್ದೆ ಜಾರಿಯಲ್ಲಿದೆ. ಇದರಿಂದಾಗಿ ಕುಕಿಗಳು, ನಾಗಾ ಮತ್ತು ಜೋಮಿ ಜನಾಂಗದವರು ಮಣಿಪುರದಲ್ಲಿಯ ಮತೇಯಿಗಳು ವಾಸಿಸುವ ಕಣಿವೆ ಭಾಗದಲ್ಲಿ ಭೂಮಿಯನ್ನು ಖರೀದಿಸಬಹುದು ಮತ್ತು ವಾಸಿಸಬಹುದು ಆದರೆ ಮತೇಯಿಗಳೂ ಅರಣ್ಯ ಪ್ರದೇಶದಲ್ಲಿ ನಾಗಾಗಳು ಮತ್ತು ಕುಕಿಗಳು ವಾಸಿಸುವ ಜಾಗದಲ್ಲಿ ಭೂಮಿ ಖರೀದಿಗೆ ಮತ್ತು ವಾಸಿಸುವುದಕ್ಕೆ ಅವಕಾಶವಿಲ್ಲ.

### ಬಂಡುಕೋರರ ಸಂಘರ್ಷದ ಇತಿಹಾಸ

1950ರಲ್ಲಿ ನಾಗಾ ಬಂಡುಕೋರರಿಂದದ ನಾಗಾ ರಾಷ್ಟ್ರಿಯ ಚಳುವಳಿ ನಡೆಯಿತು. 1964ರಲ್ಲಿ ನಾಗಾ ಬಂಡುಕೋರರನ್ನು ಹಿಮ್ಮೆಟ್ಟಿಸುವ ಪ್ರಯತ್ನ ನಡೆಯಿತು. 1980ರಲ್ಲಿ ಭಾರತ ಸರ್ಕಾರವು ಮಣಿಪುರವನ್ನು "ಸಂಘರ್ಷ ಪೀಡಿತ ಪ್ರದೇಶ" ಎಂದು ಘೋಷಿಸಿತು. 2008ರಲ್ಲಿ ಕುಕಿ – ಝೋಮಿ ಗುಂಪುಗಳು ಮತ್ತು ಕೇಂದ್ರ, ರಾಜ್ಯ ಸರ್ಕಾರಗಳ ನಡುವೆ ಕಾರ್ಯಾಚರಣೆ ಸ್ಥಗಿತಕ್ಕೆ ತ್ರಿಪಕ್ಷೀಯ ಒಪ್ಪಂದವಾಯಿತು. ಈಗ ಈ ರಾಜ್ಯದಲ್ಲಿ "ಕುಕಿ ನ್ಯಾಷನಲ್ ಆರ್ಗನೈಸೇಷನ್", ಕುಕಿ ರೆವುಲ್ಯುಷನರಿ ಆರ್ಮಿ, ಝೋಮಿ ರಿ ಯುನಿಫಿಕೇಶನ್ ಆರ್ಗನೈಸೇಷನ್, ಝೋಮಿ ರೆವುಲ್ಯುಷನರಿ ಆರ್ಮಿ, ಕುಕಿ ನ್ಯಾಷನಲ್ ಫ್ರಂಟ್, ಕುಕಿ ನ್ಯಾಷನಲ್ ಲಿಬರೇಷನ್ ಫ್ರಂಟ್, ಯುನೈಟೆಡ್ ಕುಕಿ ಲಿಬರೇಷನ್ ಫ್ರಂಟ್ ಮತ್ತು ಕುಕಿ ನ್ಯಾಷನಲ್ ಆರ್ಮಿ, ಯು ಎಸ್ ಎಲ್ ಎಫ್ ಎನ್ನುವ ಬಂಡುಕೋರ ಸಂಘಟನೆಗಳು ಇವೆ. ಇತ್ತೀಚೆಗೆ ಯು.ಎಸ್.ಎಲ್.ಎಫ್ ಸಂಘಟನೆಯಲ್ಲಿಯ ಒಳ ಜಗಳದಿಂದಾಗಿ ಮೂರು ಗುಂಪುಗಳಾಗಿವೆ.

### ಮಣಿಪುರಕ್ಕೆ ಅಂಟಿದ ಕಳಂಕ

ಡ್ರಗ್ಸ್ ದಂಧೆ ಮತ್ತು ಅಕ್ರಮ ವಲಸಿಗರು ಇವೆರಡು ಮಣಿಪುರಕ್ಕೆ ಅಂಟಿದ ಕಳಂಕಗಳು. ಮೈನ್ಮಾರ್ ದೇಶದೊಂದಿಗೆ ಗಡಿಹಂಚಿಕೆ ಗೊಂಡಿರುವುದರಿಂದ ಮತ್ತು ಕಾಡು ಪ್ರದೇಶವಾಗಿರುವುದರಿಂದಾಗಿ ಯಾವ ಭಯವು ಇಲ್ಲದೇ ಅರಣ್ಯ ಪ್ರದೇಶದಲ್ಲಿ ಕಳೆದ ಐದು ವರ್ಷದಲ್ಲಿ 15 ಸಾವಿರ ಎಕರೆ ಪ್ರದೇಶದಲ್ಲಿ ಡ್ರಗ್ಸ್ ಬೆಳೆದಿರುವುದು ಪತ್ತೆಯಾಗಿದೆ. ಇತ್ತೀಚೆಗೆ 252 ಎಕರೆ ಪ್ರದೇಶದಲ್ಲಿ ಬೆಳೆದಿದ್ದ 41ಕೋಟಿ ರೂಪಾಯಿಗಳ ಡ್ರಗ್ಸ್ ಬೆಳೆಯನ್ನು ನಾಶಮಾಡಲಾಯಿತು. ಇದು ಕುಕಿ, ನಾಗಾ, ಜೋಮಿ ಸಮುದಾಯಗಳನ್ನು ಕೆರಳಿಸಿತು. ಒತ್ತುವರಿ ಮಾಡಿದ ಅರಣ್ಯ ಪ್ರದೇಶದಲ್ಲಿ ಡ್ರಗ್ಸ್ ಬೆಳೆಯೋದನ್ನು ನಿರ್ಬಂಧಿಸಿ, ಒತ್ತುವರಿ ಭೂಮಿಯನ್ನು ತೆರವುಗೊಳಿಸಲು ಸರ್ಕಾರ ನಿರ್ಧರಿಸಿತು. ಇದು ಕುಕಿಗಳು ಅಸಮಾಧಾನಕ್ಕೆ ಮತ್ತು ಹಿಂಸಾಚಾರದ ಘಟನೆಗಳಿಗೆ ಕಾರಣವಾಯಿತು.

### ಈಗಿನ ಸ್ಥಿತಿಗೆ ಕಾರಣ

ಇದೇ ಏಪ್ರಿಲ್–20ಕ್ಕೆ ಮಣಿಪುರದ ಹೈಕೋರ್ಟ್ ಮತೇಯಿಗಳ ಬಹುದಿನದ ಬೇಡಿಕೆಯ "ಮತೇಯಿಗಳು ಎಸ್ಟಿ ವರ್ಗಕ್ಕೆ ಸೇರಬೇಕು" ಎನ್ನುವುದಕ್ಕೆ ಸರ್ಕಾರಕ್ಕೆ ಮುಂದಿನ ನಾಲ್ಕು ವಾರಗಳಲ್ಲಿ ಮತೇಯಿಗಳು ಎಸ್ಟಿಗೆ ಸೇರಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕೆಂದು ಆದೇಶಿಸಿತು. ಇದನ್ನು ಖಂಡಿಸಿ ಮೇ 03ರಂದು ಮಣಿಪುರ ಬುಡಕಟ್ಟು ವಿದ್ಯಾರ್ಥಿ ಸಂಘಟನೆ ಐಕ್ಯತಾ ಮೆರವಣಿಗೆ ಮಾಡಿದ್ದು, ಪ್ರತಿಭಟನಾ ಮೆರವಣಿಗೆಯಲ್ಲಿದ್ದ ಸಮೂಹ ಚುರಾಚಂದಪುರ ನಗರದಲ್ಲಿ ಮತೇಯಿ ಜನಾಂಗದ ಮನೆಗಳೂ

ಪುಟ 9 ಕ್ಕೆ ➢

# ಗುರುವಂದನಾ ಕಾರ್ಯಕ್ರಮ–ಬೆಂಗಳೂರು ಉತ್ತರ ಜಿಲ್ಲೆ



**ಶ್ರೀ ಗಂಗಾಧರ.ಎಂ.ವಿ,**
**ಅಧ್ಯಕ್ಷರು, ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–03**

ದಿನಾಂಕ: 15.07.2023ರ ಶನಿವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ "ಗುರುವಂದನಾ" ಕಾರ್ಯಕ್ರಮವನ್ನು ಬೆಂಗಳೂರು ಉತ್ತರ ವಲಯ–3ರ, ಡೇವಿಸ್ ರಸ್ತೆಯಲ್ಲಿರುವ ಸೆಂಟ್ ಅಲ್ಫೋನ್ಸಸ್ ಪ್ರೌಢಶಾಲೆಯಲ್ಲಿ ಬೆಂಗಳೂರು ಉತ್ತರ ಜಿಲ್ಲೆಯ ಅನೇಕ ಶಿಕ್ಷಕರು, ಮಾಧ್ಯಮಿಕ ಶಿಕ್ಷಕ ಸಂಘದ ಪದಾಧಿಕಾರಿಗಳು ಹಾಗೂ ಗುರುವಂದನಾ ಪುರಸ್ಕೃತ ಶಿಕ್ಷಕರೊಂದಿಗೆ ವಿಶೇಷವಾದ ರೀತಿಯಲ್ಲಿ ಸುಂದರವಾಗಿ ಆಚರಿಸಲಾಯಿತು.

ಮಲ್ಲಿಕಾರ್ಜುನ ಸ್ವಾಮಿ ಪ್ರೌಢಶಾಲೆಯ ವೃತ್ತಿ ಶಿಕ್ಷಕರಾದ ಶ್ರೀಮತಿ ವಿಶಾಲಾಕ್ಷಿ ಆರ್. ರವರ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀಮಲ್ಲಿಕಾರ್ಜುನ ಕೂಡಗಿರವರು ವೇದಿಕೆಯ ಮೇಲೆ ಆಸೀನರಾದ ಗಣ್ಯರನ್ನು ಸಭೆಗೆ ಪರಿಚಯಿಸಿ ಹಾರ್ದಿಕವಾಗಿ ಸ್ವಾಗತಿಸಿದರು. ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಗುರುವಂದನಾ ಪುರಸ್ಕೃತ ಶಿಕ್ಷಕರು ಹಾಗೂ ಇತರೇ ಶಿಕ್ಷಕರನ್ನು ಆದರದಿಂದ ಸ್ವಾಗತಿಸಿದರು. ವೇದಿಕೆಯ ಮೇಲಿರುವ ಗಣ್ಯರು ದೀಪ ಪ್ರಜ್ವಲನ ಮಾಡಿ, ವೇದವ್ಯಾಸರಿಗೆ ಪುಷ್ಪಾರ್ಚನೆ ಮಾಡುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿದರು.

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀ ಗಂಗಾಧರ ಎಂ.ವಿರವರು ಉತ್ತಮ ರೀತಿಯಲ್ಲಿ ಕಾರ್ಯಕ್ರಮದ ನಿರೂಪಣೆಯನ್ನು ನಡೆಸಿಕೊಟ್ಟರು. ರಾಜ್ಯ ಖಜಾಂಚಿಗಳಾದ ಶ್ರೀ ಜೆ.ಎಂ ಜೋಷಿರವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಸಂಘ ಬೆಳೆದು ಬಂದ ರೀತಿಯ ಬಗ್ಗೆ ತಿಳಿಸುತ್ತಾ ಇಡೀ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮೂಲಕ ನಡೆಸುವ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ವಿವರವಾಗಿ ತಿಳಿಸಿಕೊಟ್ಟರು.

ಗುರುವಂದನಾ ಕಾರ್ಯಕ್ರಮದ ಮುಖ್ಯ ವಕ್ತಾರರಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ ಶೈಕ್ಷಣಿಕ ಪ್ರಕೋಷ್ಠದ ಪ್ರಮುಖರಾದ ಶ್ರೀ ಪಿ.ಆರ್ ಬಸವರಾಜುರವರು ಗುರುಪರಂಪರೆಯ ಬಗ್ಗೆ ತಿಳಿಸುತ್ತಾ ಹಿಂದಿನ ಕಾಲದಲ್ಲಿ ಗುರುಕುಲ ಮತ್ತು ಶಿಷ್ಯರ ಸಂಬಂಧಗಳನ್ನು ಇಂದಿನ ಪೀಳಿಗೆಯೂ ಮುಂದುವರೆಸಿ ಅವರ ತತ್ವ, ಸಿದ್ಧಾಂತ, ಆದರ್ಶಗಳನ್ನು ಮುಂದುವರೆಸಿಕೊಂಡು ಹೋಗುವಂತೆ ತಿಳಿಸಿದರು. ಇಂದಿನ ಗುರುಗಳು ವಿದ್ಯಾರ್ಥಿಗಳಲ್ಲಿ ಸಂಸ್ಕಾರವನ್ನು ಬೆಳೆಸಿ ನವ ಸಮಾಜ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದು ಹೇಳಿದರು.

ಈ ಶೈಕ್ಷಣಿಕ ಸಾಲಿನಲ್ಲಿ ಗುರುವಂದನಾ ಕಾರ್ಯಕ್ರಮವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸುವ ಸಲುವಾಗಿ ಬೆಂಗಳೂರು ಉತ್ತರ ಜಿಲ್ಲೆಯ 4 ವಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರಲ್ಲಿ ವಿವಿಧ ವಿಷಯಗಳಲ್ಲಿ ಸಂಪನ್ಮೂಲ ಹೊಂದಿರುವ ಒಂಬತ್ತು ಪ್ರತಿಭಾವಂತ ಶಿಕ್ಷಕರನ್ನು ಗುರುತಿಸಿ ಅವರಿಗೆ ಗುರುವಂದನಾ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು. ಗೌರವವನ್ನು ಸ್ವೀಕರಿಸಿ ತಮ್ಮ ಅಭಿಮತವನ್ನು ವ್ಯಕ್ತಪಡಿಸಿದ ಎನ್‌ಕೆ ಎಸ್ ಆಂಗ್ಲಪ್ರೌಢಶಾಲೆಯ ವಿಜ್ಞಾನ ಶಿಕ್ಷಕರಾದ ಶ್ರೀ ನಾಗೇಶ್.ಎಸ್‌ರವರು ಈ ರೀತಿಯ ಕಾರ್ಯಕ್ರಮಗಳು ಶಿಕ್ಷಕರ ಮೇಲಿರುವ ಜವಾಬ್ದಾರಿಯನ್ನು ಹೆಚ್ಚಿಸಿ ಇನ್ನಷ್ಟು ಪ್ರೇರಣೆಯಿಂದ ಕೆಲಸ ಮಾಡಲು ಚೈತನ್ಯವನ್ನು ನೀಡಿದೆ ಎಂದು ತಿಳಿಸಿದರು. ಸೆಂಟ್ ಅಲ್ಫೋನ್ಸಸ್ ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಹಾಗೂ ಗುರುವಂದನಾ ಪುರಸ್ಕೃತರೂ ಆದ ಸಿಸ್ಟರ್– ಅರುಳ್ ಅಮುದಾ.ಜೆ ರವರು ತಮ್ಮ ಸಂಸ್ಥೆಯಲ್ಲಿ ಕಾರ್ಯಕ್ರಮ ಆಯೋಜನೆಗೊಂಡಿರುವುದು ತುಂಬಾ ಸಂತಸದಾಯಕ ವಿಷಯ ಎಂದು ತಿಳಿಸಿ ಎಲ್ಲರಿಗೂ ಅಭಿನಂದನೆ ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲರು ಗುರುಪರಂಪರೆಯ ವೈಶಿಷ್ಟ್ಯವನ್ನು ವಿವರಿಸುತ್ತಾ ಗುರುವಂದನಾ ಕಾರ್ಯಕ್ರಮದ ಮಹತ್ವವನ್ನು ವಿವರಿಸಿದರು. ಪಠ್ಯಕ್ರಮದ ಪರಿಷ್ಕರಣೆಯ ವಿಶ್ಲೇಷಣೆಯನ್ನು ನೆರೆದಿರುವ ಎಲ್ಲಾ ಶಿಕ್ಷಕರ ಜೊತೆ ಸಂವಾದ ಮಾಡುತ್ತಾ ಶಿಕ್ಷಕರ ಗೊಂದಲಗಳನ್ನು ಪರಿಹರಿಸಿದರು. ಬೆಂಗಳೂರು ವಿಭಾಗ ಪ್ರಮುಖರಾದ ಶ್ರೀ ಗಂಗಪ್ಪನವರು ವಂದನಾರ್ಪಣೆ ನಡೆಸಿಕೊಟ್ಟರು. ಉತ್ತರ ವಲಯ–3ರ ಕಾರ್ಯದರ್ಶಿ ಶ್ರೀ ಕಿರಣ್ ಕುಮಾರ್‌ರವರ ಶಾಂತಿಮಂತ್ರದೊಂದಿಗೆ ಕಾರ್ಯಕ್ರಮ ಸಮಾಪ್ತಿಯಾಯಿತು.

- ನೀವು ನಿಮ್ಮ ಭವಿಷ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ. ಆದರೆ, ನಿಮ್ಮ ಅಭ್ಯಾಸಗಳನ್ನು ಬದಲಾಯಿಸುವ ಅವಕಾಶ ನಿಮಗಿದೆ ಮತ್ತು ನಿಮ್ಮ ಅಭ್ಯಾಸಗಳು ಖಂಡಿತಾ ನಿಮ್ಮ ಭವಿಷ್ಯವನ್ನು ಬದಲಾಯಿಸುತ್ತವೆ.

– ಡಾ. ಎ.ಪಿ.ಜೆ. ಅಬ್ದುಲ್ ಕಲಾಂ

➢ ಪುಟ 5 ರಿಂದ.....

ರಕ್ಷಾಬಂಧನದ ಆಚರಣೆಯ ಮೂಲಕ ಸರಿಪಡಿಸಲು ಪ್ರಯತ್ನಿಸಿ ಸ್ವಲ್ಪ ಮಟ್ಟಿಗೆ ಸಫಲರಾದರು ಎಂಬುದು. ಹಿಂದೂ–ಮುಸ್ಲಿಮರು ದ್ವೇಷ ಮರೆತು ಪರಸ್ಪರ ರಾಖಿಯನ್ನು ಕಟ್ಟಿ ತಾವೆಲ್ಲ ಸಹೋದರ–ಸಹೋದರಿಯರು ಎಂಬ ಭ್ರಾತೃತ್ವದ ಭಾವನೆ ಬರುವಂತೆ ಪ್ರೇರೇಪಿಸಿದ ರಕ್ಷಾಬಂಧನದ ಮಹತ್ವ, ಇದರಿಂದ ಕೂಡ ಅರಿವಾಗುತ್ತದೆ. ಈ ಹಿನ್ನಲೆಗಳನ್ನೆಲ್ಲಾ ಗಮನಿಸಿದರೆ 'ರಾಖಿ'ಯ ಶ್ರೇಷ್ಠತೆಯ ಪರಿಚಯ ಆಗುತ್ತದೆ.

## ಆಚರಿಸುವ ವಿಧಾನ

ಶ್ರಾವಣ ಮಾಸದ ಶುಕ್ಲಪಕ್ಷದ ದಿನ, ಶುಭ ಮುಹೂರ್ತದಂದು ಸಹೋದರಿಯರು ತಮ್ಮ ಅಣ್ಣ–ತಮ್ಮಂದಿರನ್ನು ಮಣೆಯ ಮೇಲೆ ಕುಳ್ಳಿರಿಸಿ, ಪವಿತ್ರವಾದ ಕುಂಕುಮ ತಿಲಕವನ್ನು ಹಣೆಗೆ ಇಟ್ಟು, ದೇವರಲ್ಲಿ ಸಹೋದರರ ಸುರಕ್ಷತೆಗಾಗಿ, ಆರೋಗ್ಯಕ್ಕಾಗಿ, ಧೀರ್ಘಾಯಸ್ಸಿಗಾಗಿ, ಸಂಪತ್ತಿಗಾಗಿ ಮತ್ತು ಅವರ ಉಜ್ವಲ ಭವಿಷ್ಯಕ್ಕಾಗಿ ಪ್ರಾರ್ಥಿಸಿ, ರಕ್ಷೆಯನ್ನು ಅಂದರೆ ರಾಖಿಯನ್ನು ಮಣಿಕಟ್ಟಿಗೆ (ಕೈಗೆ) ಕಟ್ಟುತ್ತಾರೆ ಮತ್ತು ಸಿಹಿ ತಿನಿಸನ್ನು ತಿನ್ನಿಸಿ, ಆರತಿಯನ್ನು ಬೆಳಗಿ, ಅಕ್ಷತೆಯನ್ನು ಹಾಕಿ ಅಣ್ಣನಾದರೆ ಕಾಲಿಗೆ ನಮಸ್ಕರಿಸಿ, ತಮ್ಮನಾದರೆ ಆಶೀರ್ವದಿಸಿ ತಮ್ಮ ರಕ್ಷಣೆಯ ಜವಾಬ್ದಾರಿಯನ್ನು ಅವರ ಹೆಗಲ ಮೇಲೆ ಹಾಕಿ ಸದಾಕಾಲ ತಮ್ಮ ಜೊತೆ ವಾತ್ಸಲ್ಯದಿಂದ ಇರುವಂತೆ ಕೋರಿಕೊಳ್ಳುತ್ತಾರೆ. ರಾಖಿಯನ್ನು ಕಟ್ಟಿಸಿಕೊಂಡ ಸಹೋದರರು, ಪ್ರೀತಿಯಿಂದ ತಮ್ಮ ಶಕ್ತ್ಯಾನುಸಾರವಾಗಿ ಉಡುಗೊರೆಯನ್ನು ಕೊಟ್ಟು ಜವಾಬ್ದಾರಿಯನ್ನು ನಿಭಾಯಿಸುವುದಾಗಿ ಮಾತು ಕೊಟ್ಟು ಅದರಂತೆ ನಡೆದುಕೊಳ್ಳುತ್ತಾರೆ.

ಪ್ರಸ್ತುತ ದಿನಮಾನಗಳಲ್ಲಿ, ಅಣ್ಣ– ತಮ್ಮಂದಿರು ಹತ್ತಿರದಲ್ಲಿರದೆ ದೂರ ದೂರ ನಗರಗಳಲ್ಲಿದ್ದರೆ, ಅಂಚೆಯ ಮೂಲಕ ರಕ್ಷಾಬಂಧನದ ದಿನ ರಾಖಿಯನ್ನು ತಲುಪಿಸುವ ಹಾಗೆ ಮಾಡಿ ಬಾಂಧವ್ಯವನ್ನು ಉಳಿಸಿಕೊಳ್ಳುತ್ತಾರೆ.

ಕೆಲವು ಕಡೆ ಅಣ್ಣ–ತಂಗಿಯರ ಬಾಂಧವ್ಯದ ಹಬ್ಬವನ್ನು ಬೇರೆ ಬೇರೆ ವಿಧಿ ವಿಧಾನಗಳಿಂದಲೂ ಆಚರಿಸುತ್ತಾರೆ. ಉದಾಹರಣೆಗೆ ಶ್ರಾವಣದಲ್ಲಿ ಬರುವ ನಾಗರಪಂಚಮಿ, ದೀಪಾವಳಿಯ ಸಮಯದಲ್ಲಿ ಬರುವ ಭಾಯ್ ದೂಜಾ ಇಲ್ಲಿಯೂ ಕೂಡ ಉದ್ದೇಶ ಒಂದೇ ಆಗಿದೆ. ಅಣ್ಣ – ತಂಗಿಯರ ಪವಿತ್ರವಾದ ಸಂಬಂಧವನ್ನು ಸಂಕೇತಿಸುತ್ತದೆ.

ಒಟ್ಟಿನಲ್ಲಿ ಮನುಷ್ಯ ಮನುಷ್ಯನ ನಡುವಿನ ಸಂಬಂಧ ಉತ್ತಮವಾಗಲಿ, ಜಗತ್ತಿನ ಎಲ್ಲರೂ ಸೌಹಾರ್ದಯುತವಾಗಿ ಬಾಳಲಿ ಎಂಬುದು ಮತ್ತು ಸಹೋದರ– ಸಹೋದರಿಯರ ಅನುಬಂಧ ಚಿರಕಾಲ ಉಳಿಯಲಿ ಎಂಬುದು ಈ ಆಚರಣೆಯ ಮೂಲ ಉದ್ದೇಶವಾಗಿದೆ. ಇಂತಹ ಪವಿತ್ರ ರಕ್ಷಾಬಂಧನದ ಆಚರಣೆಯನ್ನು ಕೇವಲ ವ್ಯಾವಹಾರಿಕ ದೃಷ್ಟಿಕೋನದಿಂದ ನೋಡದೆ, ಸ್ವಾರ್ಥ ಭಾವನೆಯಿಲ್ಲದೆ ಎಲ್ಲರೂ ಒಟ್ಟಾಗಿ ಜಾತಿ ಭೇದವಿಲ್ಲದೆ ಆಚರಿಸಿ 'ರಕ್ಷಾಬಂಧನದ' ಸದುದ್ದೇಶವನ್ನು ಪಾಲಿಸೋಣ ಮತ್ತು ಆಚರಣೆಯ ಪರಂಪರೆಯನ್ನು ಮುಂದುವರಿಸೋಣ, ಶುಭವಾಗಲಿ

**"ರಕ್ಷಾ– ಶ್ರೀರಕ್ಷೆ । ಬಂಧನ – ಬಾಂಧವ್ಯ "ರಕ್ಷಾಬಂಧನ"**

●

➢ ಪುಟ 7 ರಿಂದ.....

ಮೇಲೆ ದಾಳಿ ಪ್ರಾರಂಭಿಸಿದರು. ಮುಂದೆ ಹಿಂಸಾಚಾರಕ್ಕೆ ತಿರುಗಿ ಇಂದು ಕುಕಿ ಮತೇಯಿ ಜನಾಂಗದ ನಡುವಿನ ಸಂಘರ್ಷವಾಗಿ ಅನೇಕ ಕೊಲೆಗಳು ಮನೆಗೆ ಬೆಂಕಿ ಹಚ್ಚುವುದು ಅಲ್ಲಿರುವ ಧಾರ್ಮಿಕ ಕೇಂದ್ರ ಧ್ವಂಸ ಎರಡು ಜನಾಂಗಗಳ ಮಧ್ಯ ನಡೆದಿದೆ. ಎರಡು ಜನಾಂಗಗಳು ಈಗ ನಷ್ಟವನ್ನು ಅನುಭವಿಸುತ್ತಿವೆ. ಇಂದು 60 ಸಾವಿರ ಜನರು ನಿರಾಶ್ರಿತರಾಗಿ ರಾಜ್ಯ ನಿರಾಶ್ರಿತ ಶಿಬಿರಗಳಲ್ಲಿ ಮತ್ತು ಹೊಸ ರಾಜ್ಯಗಳಲ್ಲಿ ಆಶ್ರಯ ಪಡೆದಿದ್ದಾರೆ.

## ಅನಾಗರಿಕ ಬೆಂಕಿ

ಸಮಸ್ಯೆಗಳಿಗೆ ಹೋರಾಟಗಳು, ಪ್ರತಿಭಟನೆಗಳು, ನಡೆಯುವುದು ನಾಗರಿಕ ಸಮಾಜದ ಲಕ್ಷಣವೂ ಹೌದು. ಆದರೆ ಹೋರಾಟದ ಹೆಸರಿನಲ್ಲಿ ಅನಾಗರಿಕತೆ ಮೆರೆದರೆ ಯಾವ ನಾಗರಿಕ ಸಮಾಜವು ಸಹಿಸದು. ಮಣಿಪುರದ ಜನಾಂಗಿಯ ಸಂಘರ್ಷದಲ್ಲಿ ಇಬ್ಬರು ಮಹಿಳೆಯರ ಮೇಲೆ ದೌರ್ಜನ್ಯ ನಡೆಸಿ ಬೆತ್ತಲೆ ಮೆರವಣಿಗೆ ಮಾಡಿದ್ದು ನಾಗರಿಕ ಸಮಾಜ ಸಹಿಸದು. ಈ ಘಟನೆಯನ್ನು ದೇಶವೇ ಖಂಡಿಸಿದೆ. ಈ ಘಟನೆಗೆ ಕಾರಣರಾದವರು ಕ್ಷಮೆಗೆ ಅನರ್ಹರು. ಮಣಿಪುರದಲ್ಲಿ ಆಗಲಿ ಇಲ್ಲವೆ ದೇಶದ ಯಾವುದೇ ಭಾಗದಲ್ಲಿ ಆಗಲಿ ಈ ತರಹದ ಘಟನೆಗಳು ಘಟಿಸಿದಾಗ ಸರ್ಕಾರವು ನಿರ್ದಾಕ್ಷಿಣ್ಯವಾಗಿ ಕ್ರಮಕೈಗೊಂಡು ಇನ್ನೊಮ್ಮೆ ಮರುಕಳಿಸದಂತೆ ಮಾಡಬೇಕು.

## ಮುಂದೆ.....

ಮಣಿಪುರದ ಸಮಸ್ಯೆ ಪರಿಹರಿಸುವ ಶಕ್ತಿ ಈ ದೇಶಕ್ಕಿದೆ. ಅಲ್ಲಿ ನಡೆಯುತ್ತಿರುವ ಹಿಂಸೆ ಬೇಗ ನಿಲ್ಲಲಿ. ಜನಾಂಗೀಯ ಸಂಘರ್ಷದ ಹೆಸರಿನಲ್ಲಿ ಮುಗ್ಧ ಜನರ ಬಲಿ ಆಗದಿರಲಿ. ಈ ತೆರನಾದ ಸಮಸ್ಯೆಗಳು ಎದುರಾದಾಗ ದೇಶದ ನಾಗರಿಕರಾದ ನಾವು ಪ್ರಜಾಸತ್ತಾತ್ಮಕವಾಗಿ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಮತ್ತು ಅದಕ್ಕೆ ತಕ್ಕಂತೆ ಒಳ್ಳೆಯ ಅಂಶಗಳಿಗೆ ಸಕಾರಾತ್ಮಕ ಸ್ಪಂದನೆ ಮಾಡುವುದು ಮತ್ತು ಅನಾಗರಿಕ ವರ್ತನೆಗಳಿಗೆ ಕಠೋರ ಶಬ್ದಗಳಿಂದ ಖಂಡಿಸುವುದು ಅವಶ್ಯವಲ್ಲವೆ?

## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

**D.P.I. (Special) ಅವರ ಆದೇಶ ಸಂಖ್ಯೆ T3-LBS-RKM–7/79–80 ದಿನಾಂಕ 20–6–1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (I.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ 'ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ' ಚಂದಾ ಪಾವತಿ ಮಾಡಬಹುದು.**

# ಏಕಾತ್ಮತಾಸ್ತೋತ್ರ

■ ಚಾರುಮತಿ

**ಭಗೀರಥಶ್ಚೈಕಲವ್ಯೋ ಮನುರ್ಧನ್ವಂತರಿಸ್ತಥಾ ।**
**ಶಿಬಿಶ್ಚ ರಂತಿದೇವಶ್ಚ ಪುರಾಣೋದ್ಗೀತಕೀರ್ತಯಃ ॥**

ಭರತ ಭೂಮಿಯಲ್ಲಿ ಜನಿಸಿದ ಪುಣ್ಯಪುರುಷರಿಗೆ ಲೆಕ್ಕವಿಲ್ಲ. ಅವರೆಲ್ಲರ ಆದರ್ಶ ಜೀವನ. ಒಂದೊಂದು ಪಾಠವನ್ನು ಕಲಿಸುತ್ತದೆ. ಹೀಗೆ ನಮ್ಮ ಪುರಾಣದ ಕಥೆಗಳಲ್ಲಿ ಬರುವ ಮೇಲೆ ಕಾಣಿಸಿರುವ ಒಬ್ಬೊಬ್ಬರೂ ಒಂದೊಂದು ವಿಶೇಷ ಗುಣವನ್ನು ಹೊಂದಿದವರಾಗಿದ್ದಾರೆ. ಸತತ ಪ್ರಯತ್ನದ ಮೂಲಕ ಗುರಿಮುಟ್ಟುವ ಛಲವನ್ನು ರಾಜ ಭಗೀರಥನು ಸಾಧಿಸಿ ತೋರಿಸಿದ್ದು 'ಭಗೀರಥ ಪ್ರಯತ್ನ' ವೆಂಬ ಪ್ರಸಿದ್ಧ ಲೋಕೋಕ್ತಿಯೇ ಬಳಕೆಯಲ್ಲಿ ಇರುವಂತಾಗಿದೆ. ಮಹಾ ಭಾರತದಲ್ಲಿ ಬರುವ ಏಕಲವ್ಯನ ಕಥೆಯು ಒಬ್ಬ ಅಪ್ರತಿಮ ಶಿಷ್ಯನ ಉದಾಹರಣೆಯನ್ನು ನೀಡುತ್ತದೆ. ವಿದ್ಯೆ ಕಲಿಯಲು ಬೇಕಾದ ಶ್ರದ್ಧೆ, ಗುರುವಿನ ಬಗೆಗೆ ಇರಬೇಕಾದ ಭಕ್ತಿ,ಗೌರವ, ಕಲಿಕೆಯಲ್ಲಿ ಅಗತ್ಯವಾದ ಪ್ರಾಮಾಣಿಕ ಪ್ರಯತ್ನ, ಸಾಧನೆ ಎಲ್ಲವೂ ಏಕಲವ್ಯನಿಗೆ ಏಕಲವ್ಯನೇ ಸಾಟಿಯೆಂಬಂತೆ ನಿರೂಪಿತವಾಗಿದೆ. ಒಬ್ಬ ಆದರ್ಶ ವಿದ್ಯಾರ್ಥಿಗೆ ಉದಾಹರಣೆ ಏಕಲವ್ಯನೇ ಆಗಿದ್ದಾನೆ. ಧರ್ಮ ಶಾಸ್ತ್ರವನ್ನು ಬರೆದ ಮನು ಋಷಿಯು ಸಮಾಜದಲ್ಲಿ ಪ್ರತಿಯೊಬ್ಬರೂ ಧರ್ಮ ಪರರಾಗಿ ನಡೆಯಬೇಕಾದ ರೀತಿ ನೀತಿಗಳನ್ನು ವಿವರಿಸುತ್ತ, ಒಂದು ಸುಭದ್ರ ಸಮಾಜದ ನಿರ್ಮಾಣದಲ್ಲಿ ಅಗತ್ಯವಾದ ಬುನಾದಿಯೇ ಧರ್ಮದ ವಿಚಾರವೆಂಬುದನ್ನು ತನ್ನ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾನೆ. ಧನ್ವಂತರಿಯನ್ನು ನಮ್ಮ ಪುರಾಣ ಗ್ರಂಥಗಳಲ್ಲಿ ವೈದ್ಯಶಾಸ್ತ್ರದ ದೇವತೆಯೆಂದು ಗೌರವಿಸಲಾಗಿದೆ.

ಶಿಬಿ ಚಕ್ರವರ್ತಿ ಮತ್ತು ರಂತಿದೇವ ಎಂಬ ರಾಜರು ಪರೋಪಕಾರಕ್ಕೇ ಹೆಸರಾದವರು. ಹಿಂದೂ ಧರ್ಮದಲ್ಲಿ ಚಂದ್ರ ವಂಶದ ರಾಜ. ತ್ರಿಮೂರ್ತಿಗಳು ಅವನನ್ನು ಪರೀಕ್ಷಿಸಿದಾಗ ಅವನು ವಿಷ್ಣುವಿನಿಂದ ಮೋಕ್ಷವನ್ನು ಪಡೆದುಕೊಂಡನೆಂದು ವಿವರಿಸಲಾಗಿದೆ. ಅವನು ಬಹಳ ಉದಾರಿಯಾದ ರಾಜನಾಗಿದ್ದನೆಂದು ಹೇಳಲಾಗಿದೆ. ಬಹಳ ಸತ್ಯವಂತನೆಂದು ಹೆಸರಾಗಿದ್ದ ಶಿಬಿ ಎಂಬ ರಾಜನ ಸತ್ಯತೆಯನ್ನು ಪರೀಕ್ಷಿಸಲು ಇಂದ್ರನೂ, ಅಗ್ನಿಯೂ ಆಲೋಚಿಸಿ, ಇಂದ್ರನು ಡೇಗೆ ಹಕ್ಕಿಯಾಗಿ, ಅಗ್ನಿಯು ಪಾರಿವಾಳವಾದನು. ಪ್ರಾಣಭೀತಿಯಿಂದ ಓಡಿಬಂದು, ಆಶ್ರಯ ಬೇಡಿದ ಪಾರಿವಾಳಕ್ಕೆ ಆಭಯ ನೀಡಿದ ಶಿಬಿಯು ಬೆನ್ನಟ್ಟಿ ಬಂದ ಡೇಗೆಗೆ ಆ ಪಾರಿವಾಳದ ತೂಕದ ಮಾಂಸವನ್ನು ತನ್ನ ದೇಹದಿಂದಲೇ ಕತ್ತರಿಸಿಕೊಡಲು ಸಿದ್ಧನಾಗುತ್ತಾನೆ. ಕಡೆಗೆ ಶರಣಾಗತ ರಕ್ಷಕನಾಗಿ ತನ್ನ ತಲೆಯನ್ನೇ ಅರ್ಪಿಸಲು ಮುಂದಾಗುತ್ತಾನೆ. ದೇವತೆಗಳು ಮೆಚ್ಚಿ ಅವನನ್ನು ಹರಸುತ್ತಾರೆ. ಇವರೆಲ್ಲರ ಕಥೆಗಳನ್ನು ನಮ್ಮ ಪುರಾಣಗಳಲ್ಲಿ ಸ್ತುತಿಸಲಾಗಿದೆ.

**ಬುದ್ಧಾ ಜಿನೇಂದ್ರಾ ಗೋರಕ್ಷಃ ಪಾಣಿನಿಶ್ಚ ಪತಂಜಲಿಃ।**
**ಶಂಕರೋ ಮಧ್ವನಿಂಬಾರ್ಕೌ ಶ್ರೀರಾಮಾನುಜವಲ್ಲಭೌ ॥**

ಭಾರತದಲ್ಲಿ ಕಾಲ ಕಾಲಾಂತರದಲ್ಲಿ ಹಲವು ಧರ್ಮಗಳು ಜನರಲ್ಲಿ ಬಳಕೆಗೊಂಡಿದ್ದರೂ ಸಹ ಸರ್ವಧರ್ಮ ಸಮನ್ವಯತೆಯನ್ನೂ ಸಹ ಉಳಿಸಿಕೊಂಡೇಬಂದಿದೆ. ಎಲ್ಲ ಧರ್ಮಗಳ ಮೂಲ ಧ್ಯೇಯ ಮಾತ್ರ 'ಸರ್ವೇ ಜನಾಃಸುಖಿನೋಭವಂತು' ಎಂಬುದೇ ಆಗಿದೆ. ಈ ಹಿನ್ನೆಲೆಯಲ್ಲಿ ನಮ್ಮ ಬೌದ್ಧ ಧರ್ಮ, ಜೈನ ಧರ್ಮಗಳ ಸ್ಥಾಪಕರು, ಅದ್ವೈತ, ದ್ವೈತ, ವಿಶಿಷ್ಟಾದ್ವೈತದ ತತ್ತ್ವಗಳನ್ನು ಪ್ರತಿಪಾದಿಸಿದ ಮೂವರು ಮಹಾನ್ ಆಚಾರ್ಯ ಪುರುಷರು, ನಿಂಬಾರ್ಕ ಗುರುಗಳು ಎಲ್ಲರೂ ತಮ್ಮ ತಮ್ಮ ರೀತಿಗಳಲ್ಲಿ ಜನರನ್ನು ಧರ್ಮ ಮಾರ್ಗದಲ್ಲಿ ಕರೆದೊಯ್ಯಲು ಶ್ರಮಿಸಿದ್ದಾರೆ. ಹಾಗೆಯೇ ಯೋಗ ಶಾಸ್ತ್ರವನ್ನು ಬೋಧಿಸಿದ ಪತಂಜಲಿ ಮಹಾ ಋಷಿಯು ಬೋಧಿಸಿರುವ ವ್ಯವಸ್ಥಿತವಾದ ಜೀವನ ಶೈಲಿಯು ಕೂಡ ಆರೋಗ್ಯಕರವಾದ ಜೀವನಕ್ಕೆ ಮಾರ್ಗಸೂಚಿಯಾಗಿದೆ. ಇನ್ನು ಪಾಣಿನಿ ಎಂಬ ಮಹಾನ್ ವೈಯಾಕರಣಿಯು ಬರೆದಿರುವ 'ಅಷ್ಟಾಧ್ಯಾಯಿ' ಎಂಬ ವ್ಯಾಕರಣ ಗ್ರಂಥವು ಮೊದಲ ವಿವರಣಾತ್ಮಕ ಭಾಷಾ ಶಾಸ್ತ್ರ ಗ್ರಂಥವೆಂದು ತಿಳಿಯಲಾಗಿದೆ. ಇದನ್ನು ಇಂದಿಗೂ ಒಂದು ಮಾದರಿ ಗ್ರಂಥವಾಗಿಟ್ಟುಕೊಳ್ಳಲಾಗಿದೆ. ಇಂತಹ ವಿದ್ವಾಂಸರೆಲ್ಲ ಹುಟ್ಟಿ ಬೆಳೆದ ಪುಣ್ಯಭೂಮಿ ನಮ್ಮದಾಗಿದೆ.

●

# ಅಹಂಕಾರ ಮತ್ತು ಮೈಲಿಗೆ

ಸಂಜೆಯ ಸಮಯ. ರಾಮಕೃಷ್ಣ ಪರಮಹಂಸರು ತಮ್ಮ ಗುರು ತೋತಾಪುರಿಯವರೊಡನೆ ಆಧ್ಯಾತ್ಮದ ಚರ್ಚೆ ಮಾಡುತ್ತಿದ್ದರು. ಚಳಿಗಾಲದ ದಿನಗಳವು. ಪಕ್ಕದಲ್ಲೇ ಧೂಪದ ಕುಂಡ ಉರಿಯುತ್ತಿತ್ತು. ತೋಟದ ಮಾಲಿ ಅಲ್ಲಿ ಬಂದವನೇ ಅದರಿಂದ ತನ್ನ ಭಂಗಿಯ ಚಿಲುಮೆ ತುಂಬಿಕೊಂಡ. ಇದನ್ನು ನೋಡುತ್ತಿದ್ದಂತೆಯೇ ತೋತಾಪುರಿಯವರಿಗೆ ರೇಗಿ ಹೋಯಿತು. ಮಾಲಿಗೆ ಬೈದದ್ದು ಮಾತ್ರವಲ್ಲ, ಒಂದೆರಡು ಪೆಟ್ಟನ್ನೂ ಹೊಡೆದರು. ಆಗ ಪರಮಹಂಸರು ಗಹಗಹಿಸಿ ನಗತೊಡಗಿದರು. ತೋತಾಪುರಿಯವರು ಮತ್ತಷ್ಟು ಸಿಟ್ಟಾದರು. "ಈ ಅಸ್ಪೃಶ್ಯ ಧೂಪಕುಂಡದ ಅಗ್ನಿ ಮುಟ್ಟುವ ದುಷ್ಟತನ ಮಾಡಿದ್ದಾನೆ. ನಾನದಕ್ಕೆ ಬೈದರೆ ನೀವು ನಗುತ್ತಿರುವಿರಲ್ಲಾ" ಎಂದು ಪರಮಹಂಸರನ್ನು ಕುರಿತು ಗಟ್ಟಿಯಾಗಿಯೇ ಹೇಳಿದರು.

ಆಗ ಪರಮಹಂಸರು "ಮುಟ್ಟುವುದರಿಂದ ಯಾವುದೇ ವಸ್ತು ಅಪವಿತ್ರವಾಗುವುದೆಂಬುವುದೇ ನನಗೆ ಅಚ್ಚರಿ ತರುವ ಸಂಗತಿ. ನನಗಿಂದು ತಮ್ಮ ಬ್ರಹ್ಮವಾದದ ವಾಸ್ತವಿಕತೆಯ ಅರಿವಾಗಿದೆ. ಈಗ ತಾನೇ 'ಒಬ್ಬನೇ ಬ್ರಹ್ಮ, ಮತ್ತೊಬ್ಬನಿಲ್ಲ' ಎಂದೆಲ್ಲಾ ಉಪದೇಶ ನೀಡಿದಿರಿ. ಈ ಪ್ರಪಂಚ ಬ್ರಹ್ಮ ಪ್ರಕಾಶದ ಪ್ರತಿಬಿಂಬವಲ್ಲದೇ ಬೇರಲ್ಲವೆಂದೂ ಹೇಳಿದ್ದೀರಿ. ಮತ್ತೊಂದೆಡೆ ಕೇವಲ ಬೆಂಕಿಯ ಕೆಂಡ ಮುಟ್ಟಿ ಚಿಲುಮೆಗೆ ತುಂಬಿಕೊಂಡದ್ದಕ್ಕೆ ಆ ಮಾಲಿಗೆ ಶಿಕ್ಷೆ ಕೊಟ್ಟಿರಿ. ಇದು ನಿಮ್ಮ ದೋಷವಲ್ಲ, ಬಿಡಿ. ನಿಮ್ಮೊಳಗಿನ ಅಹಂಕಾರದ ದೋಷವದು. ಅದನ್ನು ಜಯಿಸುವುದು ಸುಲಭವಲ್ಲ ಎಂದು ನಯವಾಗಿಯೇ ನುಡಿದರು. ಈ ಮಾತು ಕೇಳುತ್ತಿದ್ದಂತೆಯೇ ತೋತಾಪುರಿಯವರು ನಾಚಿಕೆಯಿಂದ ತಲೆತಗ್ಗಿಸಿದರು. ಮತ್ತೊಂದು ಅಸ್ಪೃಶ್ಯತೆ ಆಚರಣೆ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದರು.

**ಕೃಪೆ: ಕೈತುತ್ತು**

**ನಿಮ್ಮ ಕೈಲಾದಷ್ಟು ಗುರುವನ್ನು ಪ್ರೀತಿಸಿ, ಆದರೆ ಸ್ವತಂತ್ರವಾಗಿ ಆಲೋಚಿಸಿ – ಸ್ವಾಮಿ ವಿವೇಕಾನಂದ**

# 36 ನೇ ಪ್ರತಿಭಾ ಪುರಸ್ಕಾರ– ಬೆಂಗಳೂರು ಉತ್ತರ ಜಿಲ್ಲೆ






ದಿನಾಂಕ: 29.07.2023ರ ಶನಿವಾರ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ, ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಆಯೋಜಿಸಿದ್ದ 2022–23ನೇ ಶೈಕ್ಷಣಿಕ ವರ್ಷದ ಬೆಂಗಳೂರು ಉತ್ತರ ಜಿಲ್ಲೆಯ ಸರ್ಕಾರಿ, ಅನುದಾನಿತ, ಅನುದಾನ ರಹಿತ ಹಾಗೂ ಬಿ.ಬಿ.ಎಂ.ಪಿ  ಶಾಲೆಗಳಲ್ಲಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶಾಲಾ ಪ್ರಥಮಿಗ ವಿದ್ಯಾರ್ಥಿಗಳು ಹಾಗೂ ಶೇಕಡಾ 85ಕ್ಕಿಂತಲೂ ಹೆಚ್ಚು ಅಂಕಗಳಿಸಿರುವ ಶಿಕ್ಷಕರ ಮಕ್ಕಳಿಗೆ “36ನೇ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಮಲ್ಲೇಶ್ವರಂನ ಹಿಮಾಂಶು ಜ್ಯೋತಿ ಕಲಾಪೀಠದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳು, ಪೋಷಕರು, ಶಿಕ್ಷಕರೊಂದಿಗೆ ಯಶಸ್ವಿಯಾಗಿ ನೆರವೇರಿತು.

ಕಾರ್ಯಕ್ರಮವು ಬೆಂಗಳೂರು ಉತ್ತರ ಜಿಲ್ಲೆಯ ಕಾರ್ಯದರ್ಶಿಗಳಾದ ಶ್ರೀ.ಬಿ.ಆರ್ ಹರಿದಾಸ್‌ರವರ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಬೆಂಗಳೂರು ಉತ್ತರ ಜಿಲ್ಲೆಯ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಜಿ ಕೂಡಗಿರವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರನ್ನು ಪರಿಚಯಿಸಿ ಕಾರ್ಯಕ್ರಮದಲ್ಲಿ ಹಾಜರಿದ್ದ ಎಲ್ಲರನ್ನೂ ಆದರದಿಂದ ಸ್ವಾಗತಿಸಿದರು. ನಂತರ ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯ ಮಾನ್ಯರು ದೀಪ ಪ್ರಜ್ವಲನವನ್ನು ಮಾಡಿ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಕೋಶಾಧ್ಯಕ್ಷರಾದ ಶ್ರೀ ಜೆ.ಎಂ ಜೋಷಿರವರು ತಮ್ಮ ಪ್ರಾಸ್ತಾವಿಕ ನುಡಿಯಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಬೆಳೆದು ಬಂದ ಹಾದಿ ಮತ್ತು ಸಂಘದ ಮುಖಾಂತರ ಶೈಕ್ಷಣಿಕ ವರ್ಷದಲ್ಲಿ ನಡೆಸಲಾಗುತ್ತಿರುವ ಎಲ್ಲಾ ಕಾರ್ಯಕ್ರಮಗಳ ಮಾಹಿತಿಯನ್ನು ನೀಡಿದರು. ಸಂಘದ ಹಿರಿಯ ಮಹಿಳಾ ಪ್ರಮುಖರಾದ ಶ್ರೀಮತಿ ಆರ್.ಸೀತಾಲಕ್ಷ್ಮಿಯವರು ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ಬೋಧನೆಯನ್ನು ನೆರವೇರಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಉತ್ತರ ವಲಯ–3ರ ಅಧ್ಯಕ್ಷರಾದ ಶ್ರೀಗಂಗಾಧರ ಎಂವಿರವರು ಉತ್ತಮ ರೀತಿಯಲ್ಲಿ ನಡೆಸಿಕೊಟ್ಟರು.

2022–2023ನೇ ಶೈಕ್ಷಣಿಕ ಸಾಲಿನಲ್ಲಿ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಉತ್ತಮ ಅಂಕಗಳನ್ನು ಗಳಿಸಿದ ಅಪ್ರತಿಮ ವಿದ್ಯಾರ್ಥಿಗಳಾದ ಪ್ರಥಮಿಗರಲ್ಲಿ ಪ್ರಥಮಿಗರನ್ನು ಕರ್ನಾಟಕ ಸರ್ಕಾರದ ಮಲ್ಲೇಶ್ವರಮ ವಿಧಾನ ಸಭಾ ಶಾಸಕರು ಹಾಗೂ ನಿಕಟ ಪೂರ್ವ ಮಾಜಿ ಸಚಿವರಾದ ಶ್ರೀಯುತ ಡಾ॥ ಸಿ.ಎನ್ ಅಶ್ವತ್ಥ ನಾರಾಯಣ್‌ರವರು ಸ್ಮರಣಿಕೆ, ಪುಸ್ತಕ, ಪ್ರಶಸ್ತಿ ಪತ್ರಗಳನ್ನು ನೀಡಿ ಅಭಿನಂದಿಸಿದರು. ನಂತರ ತಮ್ಮ ಭಾಷಣದಲ್ಲಿ ಶಿಕ್ಷಣವೇ ಶಕ್ತಿ, ವ್ಯಕ್ತಿತ್ವ, ಜ್ಞಾನವನ್ನು ಗಳಿಸುವ ಸಾಧನ ಆದ್ದರಿಂದ ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಗುಣಮಟ್ಟದ ಶಿಕ್ಷಣವನ್ನು ನೀಡಬೇಕಾಗಿದೆ, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರಾಷ್ಟ್ರಕ್ಕೆ ನೀಡಿದ ನಮ್ಮ ಹೆಮ್ಮೆಯ ಪ್ರಧಾನಿಗಳಾದ ಶ್ರೀ ನರೇಂದ್ರಮೋದಿಯವರು, ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸಿರುವ ಮೊದಲನೆಯ ರಾಜ್ಯ ಕರ್ನಾಟಕ ಎಂಬುದನ್ನು ತಿಳಿಸಿ ಎಲ್ಲಾ ಪ್ರತಿಭಾ ಪುರಸ್ಕೃತರನ್ನೂ ಅಭಿನಂದಿಸಿದರು.

ಕರ್ನಾಟಕ ಸರ್ಕಾರದ ಮಾಜಿ ಹೆಚ್ಚುವರಿ ಕಾರ್ಯದರ್ಶಿ, ನಿವೃತ್ತ ಐ.ಐ.ಎಸ್ ಅಧಿಕಾರಿಗಳು ಆದ ಶ್ರೀ ಎಂ ಮದನಗೋಪಾಲರವರು ಶೇಕಡಾ 85ಕ್ಕಿಂತ ಹೆಚ್ಚು ಅಂಕ ಗಳಿಸಿದ ಶಿಕ್ಷಕರ ಮಕ್ಕಳಿಗೆ ಸ್ಮರಣಿಕೆ, ಪುಸ್ತಕ ಮತ್ತು ಪ್ರಶಸ್ತಿ ಪತ್ರಗಳನ್ನು ನೀಡಿ ಅಭಿನಂದಿಸಿ ಮಾತನಾಡುತ್ತಾ ಇಡೀ ವಿಶ್ವಕ್ಕೆ ನಾಗರೀಕತೆಯನ್ನು, ಸಂಸ್ಕಾರವನ್ನು ಪ್ರಚುರ ಪಡಿಸಿರುವ ರಾಷ್ಟ್ರ ಭಾರತ ಎಂದು ತಿಳಿಸುತ್ತಾ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ  ವಿವರವಾಗಿ ತಿಳಿಸಿದರು. ಹೆಣ್ಣುಮಕ್ಕಳಿಗೆ ಶಿಕ್ಷಣ ಎಷ್ಟು ಮುಖ್ಯ ಎಂದು ಹೇಳಿದರು. How to convert Information to knowledge and knowledge to wisdom ಎಂದು ತಿಳಿಸಿದರು.

ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ್ದ  ಹಿಮಾಂಶು ಜ್ಯೋತಿ ಕಲಾ ಪೀಠದ ನಿರ್ದೇಶಕರಾದ ಶ್ರೀ ಬಿ.ವಿ ವಿಜಯ ಕುಮಾರ್‌ರವರು ಮಾತನಾಡುತ್ತಾ ಇಂದಿನ ಶಿಕ್ಷಣ ವ್ಯವಸ್ಥೆ ಯಾವ ರೀತಿ ಇದೆ, ಯಾವ ರೀತಿಯಲ್ಲಿ ಈ ವ್ಯವಸ್ಥೆಯನ್ನು ಉನ್ನತೀಕರಿಸಬೇಕು ಹಾಗೂ ಎಲ್ಲಾ ವಿದ್ಯಾರ್ಥಿಗಳಲ್ಲಿ ಸುಪ್ತವಾದಂತಹ ಜ್ಞಾನ ಅಡಗಿದೆ, ಸಕಾಲದಲ್ಲಿ ಜ್ಞಾನದ ಬೆಳಕನ್ನು ಸಮಾಜಕ್ಕೆ ನೀಡಬೇಕು ಎಂದು ತಿಳಿಸಿದರು. ಪ್ರತಿಭಾ ಪುರಸ್ಕಾರ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಎಲ್ಲಾ ಪ್ರತಿಬಾ ಪುರಸ್ಕೃತರನ್ನು ಸ್ಮರಣಿಕೆ, ಪ್ರಶಸ್ತಿ ಪತ್ರಗಳನ್ನು ನೀಡಿ ಅಭಿನಂದಿಸಿ ಮಾತನಾಡಿದ ನಿಮ್ಹಾನ್ಸ್ ಮಕ್ಕಳ ಮತ್ತು ಹದಿಹರೆಯದ ಮನೋವೈದ್ಯಶಾಸ್ತ್ರ ವಿಭಾಗದ ಅಸೋಸಿಯೇಟ್ ಪ್ರೊಫೆಸರ್ ಆಗಿರುವ ಡಾ॥ ಕೆ.ಎಂ ರಾಜೇಂದ್ರರವರು ಎಲ್ಲ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳೂ ತಮ್ಮ ಪೋಷಕರಿಗೆ, ಶಿಕ್ಷಕರಿಗೆ ಕೃತಜ್ಞರಾಗಿರಬೇಕು, ಪ್ರಕೃತಿಯೊಂದಿಗೆ ಸಮ್ಮಿಲಿತವಾಗಿ ನಾವು ಯಾವ ರೀತಿ ಪರಿಸರ  ಪ್ರಕೃತಿಯೊಂದಿಗೆ ಸಮ್ಮಿಲಿತವಾಗಿ ಪರಿಸರ ಪ್ರಜ್ಞೆ ಹೊಂದಿರಬೇಕು ಎಂದು ತಿಳಿಸುತ್ತಾ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘವು ಉತ್ತಮವಾದ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿರುವುದು ಸ್ವಾಗತಾರ್ಹ ಎಂದು ಅಭಿನಂದಿಸಿದರು. ಶಿಕ್ಷಕರಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ಡಾ॥ ರೇಖಾ ಜಗದೀಶ್‌ರವರು ಎಲ್ಲಾ ವಿದ್ಯಾರ್ಥಿಗಳನ್ನು ಅಭಿನಂದಿಸಿದರು. ಸೆಂಟ್ ಅಲ್ಫೋನ್ಸಸ್ ಪ್ರೌಢಶಾಲೆಯ ವಿದ್ಯಾರ್ಥಿನಿ ಕುಮಾರಿ ಅರ್ಷಿದಾ ಬಾನು ಪ್ರತಿಭಾ ಪುರಸ್ಕೃತರ ಪರವಾಗಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಚಿದಾನಂದ ಪಾಟೀಲ್‌ರವರು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಗೌರವಿಸಿ ಮಾತನಾಡುತ್ತಾ ಎಲ್ಲಾ ಜನ ಸಾಮಾನ್ಯರನ್ನು, ವಿದ್ಯಾರ್ಥಿಗಳನ್ನು, ಶಿಕ್ಷಕರನ್ನು, ಶಿಕ್ಷಣ ವ್ಯವಸ್ಥೆಯನ್ನೂ ತಲುಪುವಂತಹ ಕಾರ್ಯಕ್ರಮಗಳನ್ನು ಸಂಘವು ರೂಪಿಸುತ್ತಿದೆ ಮತ್ತು ಇದಕ್ಕೆ ಕಾರಣೀಕರ್ತರಾದ ಕಾರ್ಯಕರ್ತರುಗಳ ಶ್ರಮವನ್ನು ಅಭಿನಂದಿಸಿದರು. ಬೆಂಗಳೂರು ಉತ್ತರ ವಿಭಾಗದ ಪ್ರಮುಖರಾದ ಶ್ರೀ ಗಂಗಪ್ಪರವರು ವಂದನಾರ್ಪಣೆ ನಡೆಸಿಕೊಟ್ಟರು. ಕುಮಾರಿ ವೇದಶ್ರೀ.ಬಿ.ಎನ್ ರವರು ಸುಶ್ರಾವ್ಯವಾಗಿ ವಂದೇ ಮಾತರಂ ಹಾಡುವುದರೊಂದಿಗೆ ಕಾರ್ಯಕ್ರಮವು ಯಶಸ್ವಿಯಾಗಿ ಸಂಪನ್ನವಾಯಿತು.

MAG(3)/NPP/23/2020-21 Registered No. RNI 45459/85
Posted at Bangalore PSO Bangalore -560 026
Date of Publishing : 17-08-2023 Date of Posting 20th or 21st of every month Posted at Periodical Rate

# ಚಿತ್ರಸುದ್ದಿ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ವತಿಯಿಂದ ಬೆಂಗಳೂರು ಉತ್ತರ ಜಿಲ್ಲೆ, ಬಳ್ಳಾರಿ, ಚಿಕ್ಕಬಳ್ಳಾಪುರ, ಬೀದರ್‌ನಲ್ಲಿ ನಡೆದ ಸದಸ್ಯತ್ವ ಅಭಿಯಾನ



ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ (ರಿ) ಬೆಂಗಳೂರು ಉತ್ತರ ಜಿಲ್ಲೆಯ ಪ್ರತಿಭಾ ಪುರಸ್ಕಾರ ಕಾರ್ಯಕ್ರಮ



ಕ.ರಾ.ಮಾ.ಶಿ.ಸಂ. ಮಂಡ್ಯ ಜಿಲ್ಲಾ ಘಟಕ ಹಾಗೂ ಅನಿಕೇತ ಶಿಕ್ಷಣ ಸಂಸ್ಥೆ ಮಂಡ್ಯ ಇವರ ಸಹಯೋಗದೊಂದಿಗೆ ನಡೆದ ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಶ್ರೀ ಅಜಿತ್ ಹನುಮಕ್ಕನವರ ಭಾಗವಹಿಸಿದ್ದರು.




ಖಾಸಗಿ ಶಾಲೆಗಳ ಮಾನ್ಯತೆ ಮತ್ತು ನವೀಕರಣದ ಸಂದರ್ಭದಲ್ಲಿ ಅಗ್ನಿಶಾಮಕ ಹಾಗೂ ಕಟ್ಟಡ ಸುರಕ್ಷತಾ ಸಂಬಂಧ ಉಂಟಾಗಿರುವ ಸಮಸ್ಯೆಯನ್ನು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಹಾಗೂ ಮಾನ್ಯ ಆಯುಕ್ತರಿಗೆ ಮಾಧ್ಯಮಿಕ ಶಿಕ್ಷಕ ಸಂಘದ ನಿಯೋಗ ಮನವರಿಕೆ ಮಾಡಿ, ಸಮಸ್ಯೆಯನ್ನು ಪರಿಹರಿಸಲು ಮನವಿ ಸಲ್ಲಿಸಲಾಯಿತು.

IF UNDELIVERED PLEASE RETURN TO SENDER

Printed By :
J. M. Joshi
Karnataka Rajya Madhyamika Shikshaka Sangha ®.)
Published By:
J. M. Joshi
Karnataka Rajya Madhyamika Shikshaka Sangha (R.)
Owned By : J. M. Joshi
on behalf of Karnataka Rajya Madhyamika Shikshaka Sangha (R.)

Printed At: Rashtrotthana Mudranalaya,
'Keshava Shilpa', Kempegowda Nagar, Bengaluru -560 019

Published By : Karnataka Rajya Madhyamika Shikshaka Sangha (R.)
# 55, 'Yadavasmurthi', 1st Main, Sheshadripuram, Bengaluru -560 020

Editor : J. M. Joshi, Karnataka Rajya Madhyamika Shikshaka Sangha (R.), Bengaluru -20

srushtidesigns@gmail.com